ಬಹಳ ಮುಖ್ಯವಾದ ನಿಯಮ ಹಾಗೂ ನಿಬಂಧನೆಗಳು

ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್

"ಬಹಳ ಮುಖ್ಯವಾದ ನಿಯಮ ಹಾಗೂ ನಿಬಂಧನೆಗಳು" ("ಎಂಐಟಿಸಿ") ಎಲ್ಲ ಕ್ರೆಡಿಟ್ ಕಾರ್ಡ್ ಗಳು/ಕಾರ್ಡ್ ಸದಸ್ಯರು/ಕ್ರೆಡಿಟ್ ಕಾರ್ಡ್ ಗಳ ಅರ್ಜಿದಾರರು/ಐಡಿಬಿಐ ಬ್ಯಾಂಕ್ ಗ್ರಾಹಕರು/ಬ್ಯಾಂಕಿನ ಕ್ರೆಡಿಟ್ ಕಾರ್ಡ್ ಉತ್ಪನ್ನದ ಮೇಲೆ ಆಸಕ್ತಿ ವಹಿಸುವ ಸಾರ್ವಜನಿಕ ಸದಸ್ಯರಿಗೆ ಅನ್ವಯಿಸುತ್ತದೆ. ಎಂಐಟಿಸಿ ಬ್ಯಾಂಕಿನ ವಿವೇಚನೆಯನ್ನು ಆಧರಿಸಿ ಮತ್ತು ಕಾಲಕಾಲಕ್ಕೆ ಅನ್ವಯಿಸುವ ಕಾನೂನುಗಳಂತೆ ಮತ್ತು ಅವುಗಳ ಸೇರ್ಪಡೆಗೆ ಅನ್ವಯ ಬದಲಾಗಬಹುದಾಗಿದೆ ಕಾರ್ಡ್ ದಾರರ ಒಪ್ಪಂದದ("ಕಾರ್ಡ್ ದಾರರ ಒಪ್ಪಂದ") ನಿಯಮ ಹಾಗೂ ನಿಬಂಧನೆಗಳೊಂದಿಗೆ ಓದಿಕೊಳ್ಳಬಹುದಾಗಿದೆ. ಎಂಐಟಿಸಿ ಮತ್ತು ಕಾರ್ಡ್ ದಾರರ ಒಪ್ಪಂದಗಳನಡುವೆ ಯಾವುದೇ ಅಸಮರ್ಪಕತೆ ಇದ್ದಲ್ಲಿ ಇಲ್ಲಿ ನಮೂದಿಸಿದ ಹೊರತಾಗಿ ಕಾರ್ಡ್ ದಾರರ ಒಪ್ಪಂದವು ಊರ್ಜಿತವಾಗುತ್ತದೆ. ಇಲ್ಲಿ ಬಳಸಲಾದ ಆದರೆ ವ್ಯಾಖ್ಯಾನಿಸದ ಎಲ್ಲ ನಿಯಮಗಳು ಕಾರ್ಡ್ ದಾರರ ಒಪ್ಪಂದದಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನು ಹೊಂದಿರುತ್ತವೆ.

1. **<u>ಶುಲ್ಕಗಳು ಮತ್ತು ದಂಡಶುಲ್ಕಗಳ ವೇಳಾಪಟ್ಟಿ</u>**

a) **<u>ಸೇರ್ಪಡಿಕೆ ಶುಲ್ಕಗಳು ಮತ್ತು ವಾರ್ಷಿಕ ಸದಸ್ಯತ್ವ ಶುಲ್ಕಗಳು</u>**

ಸೇರ್ಪಡಿಕೆ ಶುಲ್ಕಗಳು ಮತ್ತು ವಾರ್ಷಿಕ ಸದಸ್ಯತ್ವ ಶುಲ್ಕಗಳು ಪ್ರಾಥಮಿಕ ಮತ್ತು ಆಡ್-ಆನ್ ಕ್ರೆಡಿಟ್ ಕಾರ್ಡ್ (ಗಳು)ಗೆ ಅನ್ವಯಿಸುತ್ತವೆ. ಈ ಶುಲ್ಕಗಳು ಕಾರ್ಡ್ ದಾರರು ಪಡೆಯುವ ಐಡಿಬಿಐ ಕ್ರೆಡಿಟ್ ಕಾರ್ಡ್ ಕೊಡುಗೆ ಆಧರಿಸಿ ವ್ಯತ್ಯಾಸಗೊಳ್ಳಬಹುದು. ಯಾವುದೇ ಆಡ್-ಆನ್ ಕಾರ್ಡ್ ದಾರ(ರು)ರ ಶುಲ್ಕ ಒಳಗೊಂಡಂತೆ ಈ ಶುಲ್ಕಗಳನ್ನು ಕಾರ್ಡ್ ದಾರರ ಕ್ರೆಡಿಟ್ ಕಾರ್ಡ್ ಖಾತೆಗೆ ನೀಡಿಕೆ/ನವೀಕರಣ ಸಂದರ್ಭದಲ್ಲಿ ವಿಧಿಸಲಾಗುತ್ತದೆ ಮತ್ತು ಅದು ವಿಧಿಸಿದ ತಿಂಗಳ ಮಾಸಿಕ ಕ್ರೆಡಿಟ್ ಕಾರ್ಡ್ ಸ್ಟೇಟ್ಮೆಂಟ್ ನಲ್ಲಿ ನಮೂದಾಗಿರುತ್ತದೆ. ಕ್ರೆಡಿಟ್ ಕಾರ್ಡ್ ರದ್ದುಪಡಿಸಿದರೆ ಯಾವುದೇ ಶುಲ್ಕಗಳನ್ನು ಹಿಂದಿರುಗಿಸಲಾಗುವುದಿಲ್ಲ. ಪ್ರಸ್ತುತ ಶುಲ್ಕಗಳನ್ನು ಶುಲ್ಕಗಳು ಮತ್ತು ದಂಡಶುಲ್ಕಗಳ ವೇಳಾಪಟ್ಟಿಯಲ್ಲಿ ಲಗತ್ತಿಸಲಾಗಿದೆ.

b) **<u>ನಗದು ಮುಂಗಡ ಶುಲ್ಕಗಳು</u>**

ಕಾರ್ಡ್ ದಾರರಿಗೆ ಭಾರತ ಮತ್ತು ವಿದೇಶಗಳಲ್ಲಿ ಐಡಿಬಿಐ ಬ್ಯಾಂಕ್ ಅಥವಾ ಇತರೆ ಎಟಿಎಂಗಳಲ್ಲಿ ದಿನಪೂರ್ತಿ ಲಭ್ಯವಿರುತ್ತದೆ. ವಹಿವಾಟಿನ ಮೊತ್ತದ 2.5% ವಹಿವಾಟು ಶುಲ್ಕ ಅಥವಾ ರೂ.500ರಲ್ಲಿ ಯಾವುದು ಹೆಚ್ಚೋ ಅದನ್ನುನಗದು ಮುಂಗಡ ಪಡೆಯುವ ಸಮಯಕ್ಕೆ ಅಂತಹ ಎಲ್ಲ ವಹಿವಾಟುಗಳಿಗೆ ವಿಧಸಲಾಗುತ್ತದೆ ಮತ್ತು ಅದು ಕಾರ್ಡ್ ದಾರರ ಮುಂದಿನ ಮಾಸಿಕ ಸ್ಟೇಟ್ಮೆಂಟ್ ನಲ್ಲಿ ನಮೂದಿಸಲಾಗುತ್ತದೆ. ಈ ವಹಿವಾಟಿನ ಶುಲ್ಕದ ಬದಲಾವಣೆಯು ಐಡಿಬಿಐ ಬ್ಯಾಂಕ್ ನ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತದೆ. ನಗದು ಮುಂಗಡ ವಹಿವಾಟುಗಳು ಪ್ರತಿನಿತ್ಯದ ಒಟ್ಟು ಬಾಕಿ ಇರುವ ಮೊತ್ತಗಳಿಂದ ಹಣ ಪಡೆಯುವ ದಿನಾಂಕದವರೆಗೆ ಹಣಕಾಸು ಶುಲ್ಕ ಅನ್ವಯಿಸುತ್ತವೆ. ಹಣಕಾಸು ಶುಲ್ಕವನ್ನು ಬಿಲ್ಲಿಂಗ್ ಆವರ್ತದ ಕೊನೆಯ ದಿನದಂದು ಕ್ರೆಡಿಟ್ ಕಾರ್ಡ್ ಖಾತೆಯಿಂದ ಪಡೆಯಲಾಗುತ್ತದೆ.

c) **<u>ಶುಲ್ಕಗಳು</u>**

(i) ಶುಲ್ಕಗಳು ಮತ್ತು ದಂಡಶುಲ್ಕಗಳು ಅನ್ವಯಿಸುವಂತೆ ಕಾಲಕಾಲಕ್ಕೆ ಬದಲಾಗಬಹುದಾಗಿದ್ದು ಐಡಿಬಿಐ ಬ್ಯಾಂಕ್ ನೀಡುತ್ತಿರುವ ನಿರ್ದಿಷ್ಟ ಸೇವೆಗಳಿಗೆ ಅಥವಾ ಕಾರ್ಡ್ ಸದಸ್ಯರು ಆತ/ಆಕೆಯ ಕಾರ್ಡ್ ಖಾತೆಯ ಉಲ್ಲೇಖದಂತೆ ಮಾಡಿದ ಉಪೇಕ್ಷೆಗಳಿಗೆ ಕಾರ್ಡ್ ಸದಸ್ಯರು ಪಾವತಿಸಬೇಕಾಗುತ್ತದೆ

(ii) ಐಡಿಬಿಐ ಬ್ಯಾಂಕ್ ಗ್ರಾಹಕರಿಗೆ ತಿಳಿಸಿ ಕಾಲಕಾಲಕ್ಕೆ ಯಾವುದೇ ದಂಡಶುಲ್ಕಗಳು ಅಥವಾ ಶುಲ್ಕಗಳನ್ನು ಬದಲಾಯಿಸುವ ಅಥವಾ ಯಾವುದೇ ಹೊಸ ದಂಡಶುಲ್ಕಗಳನ್ನು ಅಥವಾ ಸೂಕ್ತವೆನಿಸುವ ಶುಲ್ಕಗಳನ್ನು ವಿಧಿಸುವ ಹಕ್ಕುಗಳನ್ನು ಉಳಿಸಿಕೊಳ್ಳುತ್ತದೆ.

(iii) ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.) ಒಳಗೊಂಡು ಅನ್ವಯಿಸುವ ಪರೋಕ್ಷ ತೆರಿಗೆಗಳನ್ನು ನಮ್ಮ ಎಲ್ಲ ಶುಲ್ಕಗಳು ಮತ್ತು ದಂಡಶುಲ್ಕಗಳು ಮತ್ತು ಪರೋಕ್ಷ ತೆರಿಗೆಯಲ್ಲಿ ಮತ್ತಾವುದೇ ಮೊತ್ತವು ತೆರಿಗೆಗೆ ಅನ್ವಯಿಸಿದಲ್ಲಿ ಅದರ ಕುರಿತು ದಯವಿಟ್ಟು ತಿಳಿಯಿರಿ.

(iv) ಪಾವತಿಯ ದಿನಾಂಕದಂದು ಕನಿಷ್ಠ ಬಾಕಿ ಹಣವನ್ನು ಪಾವತಿಸದೇ ಇದ್ದಲ್ಲಿ ತಡವಾದ ಪಾವತಿಯ ಶುಲ್ಕವು ಅನ್ವಯಿಸುತ್ತದೆ.

(v) ನಿಗದಿಪಡಿಸಲಾದ ಒಟ್ಟಾರೆ ಸಾಲದ ಮಿತಿ ಮೀರಿದ ಸಂದರ್ಭದಲ್ಲಿ ಓವರ್ ಲಿಮಿಟ್ ಶುಲ್ಕಗಳು ಅನ್ವಯಿಸುತ್ತವೆ.

1

(vi) ಎಲ್ಲ ವಿದೇಶಿ ಕರೆನ್ಸಿ ವಹಿವಾಟುಗಳಿಗೆ ವಿನಿಮಯ ದರ ಬಳಕೆಯನ್ನು ವಿಸಾ/ಮಾಸ್ಟರ್ ಕಾರ್ಡ್/ರುಪೇ ಮತ್ತು ಐಡಿಬಿಐ ಬ್ಯಾಂಕ್ ನಿರ್ಧರಿಸುತ್ತವೆ ಮತ್ತು ಕಾರ್ಡ್ ದಾರರಿಗೆ ಅನ್ವಯಿಸುತ್ತದೆ. ಎಲ್ಲ ಅಂತಾರಾಷ್ಟ್ರೀಯ ವಹಿವಾಟುಗಳಿಗೆ ಕ್ರಾಸ್-ಕರೆನ್ಸಿ ಪರಿವರ್ತನೆಯ ದರದ ಮೇಲೆ 3.5% ಮಾರ್ಕ್-ಅಪ್ ಇರುತ್ತದೆ.

d) ಬಡ್ಡಿರಹಿತ ಅವಧಿ

ಬಡ್ಡಿರಹಿತ ಅವಧಿಯು ನಿರ್ದಿಷ್ಟ ಕ್ರೆಡಿಟ್ ಕಾರ್ಡ್ ಮೇಲೆ ಅನ್ವಯಿಸಬಲ್ಲ ಸ್ಕೀಂ ಆಧರಿಸಿ 18ರಿಂದ 48 ದಿನಗಳವರೆಗೆ (ದಯವಿಟ್ಟು ಅನ್ವಯಿಸುವ ಶುಲ್ಕಗಳು ಮತ್ತು ದಂಡಶುಲ್ಕಗಳ ವೇಳಾಪಟ್ಟಿ ಪರಿಶೀಲಿಸಿ) ಮತ್ತು ವ್ಯಾಪಾರಿಯೊಂದ ಕ್ಲೈಮ್ ಗಳ ಸಲ್ಲಿಕೆಯವರೆಗೆ ಇರಬಹುದು. ಆದಾಗ್ಯೂ ಇದು ಪೂರ್ಣವಾಗಿ ಪಾವತಿಸದ ಅಥವಾ ಕಾರ್ಡ್ ಸದಸ್ಯರು ಎಟಿಎಂನಿಂದ ನಗದು ಪಡೆದಿದ್ದರೆ ಅನ್ವಯಿಸುವುದಿಲ್ಲ.

ಉದಾಹರಣೆಗೆ: ಜೂನ್ 21ರಿಂದ ಜುಲೈ 20ರವರೆಗಿನ ಸ್ಟೇಟ್ಮೆಂಟ್ ಅವಧಿಗೆ, ಪಾವತಿಯ ಬಾಕಿ ದಿನಾಂಕ 07ನೇ ಆಗಸ್ಟ್ ಆಗಿರುತ್ತದೆ. ನೀವು ಒಟ್ಟು ಬಾಕಿಯನ್ನು ಹಿಂದಿನ ತಿಂಗಳ ಒಟ್ಟು ಬಾಕಿ ಮೊತ್ತವನ್ನು ಪಾವತಿಯ ಬಾಕಿ ದಿನಾಂಕದಂದು ಪಾವತಿಸಿದ್ದೀರಿ ಎಂದುಕೊಂಡರೆ ಬಡ್ಡಿ ಮುಕ್ತ ಅವಧಿಯು ಹೀಗಿರುತ್ತದೆ:

1. ಜೂನ್ 21ರಂದು ಖರೀದಿಸಿದ್ದಕ್ಕೆ ಬಡ್ಡಿಮುಕ್ತ ಅವಧಿಯು ಜೂನ್ 21ರಿಂದ ಆಗಸ್ಟ್ 07ರವರೆಗೆ ಇರುತ್ತದೆ ಅಂದರೆ 48 ದಿನಗಳು.
2. ಜುಲೈ 14ರಂದು ಖರೀದಿಸಿದ್ದಕ್ಕೆ ಬಡ್ಡಿಮುಕ್ತ ಅವಧಿಯು ಜುಲೈ 14ರಿಂದ ಆಗಸ್ಟ್ 07ರವರೆಗೆ ಇರುತ್ತದೆ ಅಂದರೆ 25 ದಿನಗಳು. ಆದ್ದರಿಂದ ಬಡ್ಡಿಮುಕ್ತ ಅವಧಿಯು ಖರೀದಿಯ ದಿನಾಂಕ ಆಧರಿಸಿ ವ್ಯತ್ಯಾಸಗೊಳ್ಳಬಹುದು. ಆದಾಗ್ಯೂ ಹಿಂದಿನ ತಿಂಗಳ ಒಟ್ಟು ಬಾಕಿ ಮೊತ್ತವನ್ನು ಬಾಕಿ ಪಾವತಿಯ ದಿನಾಂಕದಂದು ಪಾವತಿಸದೇ ಇದ್ದಲ್ಲಿ ಉಚಿತ ಸಾಲದ ಅವಧಿ ಕೊನೆಗೊಳ್ಳುತ್ತದೆ ಮತ್ತು ಯಾವುದೇ ಬಡ್ಡಿ ಮುಕ್ತ ಅವಧಿ ಇರುವುದಿಲ್ಲ. ನಗದು ಮುಂಗಡಗಳಿಗೆ ಬಡ್ಡಿಯನ್ನು ವಹಿವಾಟು ನಡೆಸಿದ ದಿನಾಂಕದಿಂದ ಪಾವತಿಯ ದಿನಾಂಕದವರೆಗೂ ವಿಧಿಸಲಾಗುತ್ತದೆ.

ಸೂಚನೆ: ದಯವಿಟ್ಟು ಶುಲ್ಕಗಳು ಮತ್ತು ದಂಡಶುಲ್ಕಗಳ ವೇಳಾಪಟ್ಟಿಗೆ ಅನುಬಂಧ ಪರಿಶೀಲಿಸಿ.

2. ಹಣಕಾಸು/ಬಡ್ಡಿ/ಸೇವಾ ಶುಲ್ಕಗಳು

(i) ಕಾರ್ಡ್ ಸದಸ್ಯರು ಅವರ ಬಾಕಿಯನ್ನು ಪೂರ್ಣ ಪಾವತಿಸದೇ ಇರಲು ಆಯ್ಕೆ ಮಾಡಿಕೊಂಡಲ್ಲಿ, ಮತ್ತು ಕಾರ್ಡ್ ಸದಸ್ಯರು ಪಡೆದುಕೊಂಡ ಎಲ್ಲ ನಗದು ಮುಂಗಡಗಳ ಮೇಲೆ ವಹಿವಾಟು ನಡೆಸಿದ ದಿನಾಂಕದಿಂದ ಎಲ್ಲ ವಹಿವಾಟುಗಳಿಗೆ ಮಾಸಿಕ ಶೇಕಡಾವಾರು ದರದಲ್ಲಿ ಹಣಕಾಸು ದಂಡಶುಲ್ಕಗಳು ಅವುಗಳನ್ನು ಮರುಪಾವತಿಸುವವರೆಗೂ ಅನ್ವಯಿಸುತ್ತವೆ. ಹಣಕಾಸು ಶುಲ್ಕಗಳು ಪಾವತಿಸಬೇಕಾದಲ್ಲಿ ಕಾರ್ಡ್ ಸದಸ್ಯರ ಖಾತೆಯಿಂದ ಕಾರ್ಡ್ ನಲ್ಲಿರುವ ಒಟ್ಟು ಬಾಕಿ ಪಾವತಿಯಾಗುವವರೆಗೂ ಪಡೆದುಕೊಳ್ಳಲಾಗುತ್ತದೆ.

(ii) ನಗದು ಮುಂಗಡಗಳ ಹಣಕಾಸು ಶುಲ್ಕಗಳು ವಹಿವಾಟು ನಡೆಸಿದ ದಿನಾಂಕದಿಂದ ಪೂರ್ಣ ಪಾವತಿ ಮಾಡುವ ದಿನಾಂಕದರೆಗೂ ಅನ್ವಯಿಸುತ್ತವೆ.

(iii) ಗ್ರಾಹಕನು ಯಾವುದೇ ಬಾಕಿ ಮೊತ್ತವನ್ನು ಮುಂದಕ್ಕೆ ಕೊಂಡೊಯ್ದಲ್ಲಿ ಅಥವಾ ನಗದು ಮುಂಗಡ ಪಡೆದಲ್ಲಿ ಹಣಕಾಸು ಶುಲ್ಕಗಳನ್ನು ಪ್ರತಿನಿತ್ಯದ ಬಾಕಿಯ ಮೇಲೆ ಲೆಕ್ಕ ಹಾಕಲಾಗುತ್ತದೆ, ಅದು ಮುಂದಕ್ಕೆ ಕೊಂಡೊಯ್ದ ಬಾಕಿಗಳಿಗೆ ಮತ್ತು ಹೊಸ ಬಿಲ್ಲಿಂಗ್ ಗಳಿಗೆ ಅನ್ವಯಿಸುತ್ತದೆ.

(iv) ಕಾರ್ಡ್ ದಾರರು ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ನ ರಿವಾಲ್ವಿಂಗ್ ಕ್ರೆಡಿಟ್ ಸೌಲಭ್ಯ ಪಡೆದರೆ ಮತ್ತು ಆದ್ದರಿಂದ ಮಾಸಿಕ ಬಿಲ್ಲಿಂಗ್ ಸ್ಟೇಟ್ಮೆಂಟ್ ನಲ್ಲಿ ನಮೂದಿತವಾದ ಒಟ್ಟು ಬಾಕಿಗಿಂತ ಕಡಿಮೆ ಮೊತ್ತ ಪಾವತಿಸಲು ಆಯ್ಕೆ ಮಾಡಿಕೊಂಡರೆ ಇಡೀ ಬಾಕಿ ಮೊತ್ತವು ಹಣಕಾಸು ಶುಲ್ಕಗಳಿಗೆ ಒಳಪಡುತ್ತದೆ ಮತ್ತು ಹಿಂದಿನ ಬಾಕಿ ಮೊತ್ತವನ್ನು ಪೂರ್ಣ ಪಾವತಿಸುವವರೆಗೆ ಎಲ್ಲ ಹೊಸ ವಹಿವಾಟುಗಳು ಕೂಡಾ ಹಣಕಾಸು ಶುಲ್ಕಗಳಿಗೆ ಒಳಪಡುತ್ತವೆ.

(v) ಪಾವತಿಯ ಬಾಕಿ ದಿನಾಂಕದಂದು ಕನಿಷ್ಠ ಬಾಕಿ ಮೊತ್ತವನ್ನು ಪಾವತಿಸದೇ ಇದ್ದಲ್ಲಿ ತಡವಾಗಿ

ಪಾವತಿಸಿದ ದಂಡಶುಲ್ಕಗಳು ಅನ್ವಯಿಸುತ್ತವೆ. ಕನಿಷ್ಠ ಬಾಕಿ ಮೊತ್ತವು ಸ್ಟೇಟ್ಮೆಂಟ್ ನಲ್ಲಿ ನಮೂದಿಸಿದಂತೆ ಇರುತ್ತದೆ. ತಡವಾಗಿ ಪಾವತಿಸಿದ ದಂಡಶುಲ್ಕಗಳನ್ನು ತಪ್ಪಿಸಲು ಪಾವತಿಯ ಬಾಕಿ ದಿನಾಂಕದಂದು ಅಥವಾ ಮುನ್ನ ಐಡಿಬಿಐ ಬ್ಯಾಂಕ್ ಕಾರ್ಡ್ ಖಾತೆಗೆ ಹಣ ಜಮಾ ಆಗಬೇಕು. ತಡವಾಗಿ ಪಾವತಿಸಿದ ದಂಡಶುಲ್ಕಗಳು ಹೀಗೆ ಅನ್ವಯಿಸುತ್ತವೆ

ತಡವಾಗಿ ಪಾವತಿಸಿದ ದಂಡಶುಲ್ಕ (ಪ್ರತಿ ಸಂದರ್ಭಕ್ಕೆ, ಬಾಕಿ ಮೊತ್ತ ಆಧರಿಸಿ)	< = ₹500 – ಶೂನ್ಯ > ₹500 to < = ₹5000 - ₹400 > ₹5000 to < = ₹10000 - ₹500 > ₹10000 to < = ₹20000 - ₹750 > ₹20000 - ₹950

(vi) ಅವಧಿ ಮೀರಿದ ಶುಲ್ಕಗಳು ಒಟ್ಟು ಸಾಲದ ಮಿತಿ ದಾಟಿದ ಮೊತ್ತಕ್ಕೆ ಅನ್ವಯಿಸುತ್ತಿದ್ದು ಕನಿಷ್ಠ ₹500 ಒಳಗೊಂಡು ಅವಧಿ ಮೀರಿದ ಮೊತ್ತದ 2.5% ದರ ಅನ್ವಯಿಸುತ್ತದೆ.

ಈ ಕೆಳಗಿನ ವಿವರಣೆಯು ವಿವಿಧ ದಂಡಶುಲ್ಕಗಳನ್ನು ಲೆಕ್ಕ ಹಾಕುವ ವಿಧಾನವನ್ನು ತೋರಿಸುತ್ತದೆ-

ಉದಾಹರಣೆ 1: ರೀಟೇಲ್ ಖರೀದಿಗಳ ಮೇಲೆ ಬಡ್ಡಿ/ಸೇವಾ ಶುಲ್ಕಗಳು (ಬಾಕಿಯ ಭಾಗಶಃ ಪಾವತಿ)
ನೀವು ಪೂರ್ಣವಾಗಿ ಹಿಂದಿನ ಎಲ್ಲ ಬಾಕಿಗಳನ್ನೂ ಪಾವತಿಸಿರುತ್ತೀರಿ ಮತ್ತು ನಿಮ್ಮ ಐಡಿಬಿಐ ಕ್ರೆಡಿಟ್ ಕಾರ್ಡ್ ನಲ್ಲಿ ಯಾವುದೇ ಬಾಕಿ ಮೊತ್ತವಿಲ್ಲ ಎಂದುಕೊಳ್ಳಿ. ನಿಮ್ಮ ಸ್ಟೇಟ್ಮೆಂಟ್ ದಿನಾಂಕ ಪ್ರತಿ ತಿಂಗಳ 20ರಂದು. ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಈ ಕೆಳಕಂಡ ವಹಿವಾಟುಗಳ ಪಟ್ಟಿಯನ್ನು ನಡೆಸಿರುತ್ತೀರಿ.

ದಿನಾಂಕ	ದಿನಾಂಕ	ಮೊತ್ತ
10 April	ಗೃಹಬಳಕೆ ಉತ್ಪನ್ನಗಳ ಖರೀದಿ	₹15,000/-
15 April	ಉಡುಪು ಮತ್ತು ಅಕ್ಸೆಸರಿಗಳ ಖರೀದಿ	₹5,000/-
20 April	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
08 May	ಪಾವತಿ ಬಾಕಿ ದಿನಾಂಕ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
12 May	ಕಾರ್ಡ್ ಖಾತೆಗೆ ಪಾವತಿ *(ಇಲ್ಲಿ ತಡವಾಗಿ ಪಾವತಿಸಿದ ದಂಡಶುಲ್ಕಗಳು ಅನ್ವಯಿಸುತ್ತವೆ)*	₹2,000 (ಜಮಾ)
14 May	ದಿನಸಿ ಖರೀದಿ	₹1,000/-
15 May	ಕಾರ್ಡ್ ಖಾತೆಗೆ ಪಾವತಿ	₹15,000 (ಜಮಾ)

ಆದ್ದರಿಂದ ಮೇ 20ರ ದಿನಾಂಕದ ಸ್ಟೇಟ್ಮೆಂಟ್ ನಲ್ಲಿ ಈ ಕೆಳಕಂಡವುಗಳು ನಿಮ್ಮಿಂದ ಪಾವತಿಸಬೇಕಾದ ಒಟ್ಟು ಮೊತ್ತದ ಈ ಅಂಶಗಳಾಗಿ ನಮೂದಿಸಲ್ಪಡುತ್ತವೆ:

ಲೆಕ್ಕ ಹಾಕಿದ ಬಡ್ಡಿ= (ಬಾಕಿ ಇರುವ ಒಟ್ಟು ಮೊತ್ತ x 2.90%* ಪ್ರತಿ ತಿಂಗಳಿಗೆ x 12 ತಿಂಗಳು x ದಿನಗಳ ಸಂಖ್ಯೆ)/ 365

(a) ₹15000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಏಪ್ರಿಲ್ 10ರಿಂದ ಮೇ 11ರವರೆಗೆ ಬಡ್ಡಿ (ಅಂದರೆ 32 ದಿನಗಳಿಗೆ) = ₹457.64

₹13000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಮೇ 12ರಿಂದ ಮೇ 14ರವರೆಗೆ ಬಡ್ಡಿ(ಅಂದರೆ 3 ದಿನಗಳಿಗೆ) = ₹37.18

₹5000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಏಪ್ರಿಲ್ 15ರಿಂದ ಮೇ 14ರವರೆಗೆ ಬಡ್ಡಿ (ಅಂದರೆ 30 ದಿನಗಳಿಗೆ)= ₹143.01

₹3000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಮೇ 15ರಿಂದ ಮೇ 20ರವರೆಗೆ ಬಡ್ಡಿ (ಅದರೆ 5 ದಿನಗಳಿಗೆ) = ₹14.30

₹1000ಕ್ಕೆ ಬಡ್ಡಿ (ಮೇ 14ರಿಂದ ಮೇ 20ರವರೆಗೆ ಪ್ರತಿ ತಿಂಗಳಿಗೆ @ 2.90%ರಲ್ಲಿ ಹೊಸ ವ್ಯಯಗಳು(ಅಂದರೆ 6 ದಿನಗಳು)= ₹5.72 ಅಂದರೆ ಒಟ್ಟು ಬಡ್ಡಿ ₹657.85

(b) ತಡವಾಗಿ ಪಾವತಿಸಿದ ಶುಲ್ಕಗಳು= ₹750

(c) ಜಿ.ಎಸ್.ಟಿ.@ 18% ರ ಬಡ್ಡಿದರದಲ್ಲಿ ಮತ್ತು ಇತರೆ ಶುಲ್ಕಗಳು = ₹253.41

(d) ಒಟ್ಟು ಬಾಕಿ ಇರುವ ಪ್ರಧಾನ ಮೊತ್ತ= ₹4000 (₹1000 ಹೊಸ ವ್ಯಯ+ ಬಾಕಿ ₹3000 ಹಿಂದಿನ ತಿಂಗಳ ಬಿಲ್ಲಿಂಗ್ ಅವಧಿಯ ಬಾಕಿ).

(e) ಆದ್ದರಿಂದ ಒಟ್ಟು ಬಾಕಿ ಮೊತ್ತ = (a) + (b) + (c) + (d) = ₹ 5661.26

3

ಉದಾಹರಣೆ 2: ರೀಟೇಲ್ ಖರೀದಿಗಳ ಮೇಲೆ ಬಡ್ಡಿ/ಸೇವಾ ಶುಲ್ಕಗಳು (ಅಂತಿಮ ದಿನಾಂಕದ ನಂತರ ಪೂರ್ಣ ಬಾಕಿ ಪಾವತಿಸಬೇಕು)

ನೀವು ಪೂರ್ಣವಾಗಿ ಹಿಂದಿನ ಎಲ್ಲ ಬಾಕಿಗಳನ್ನೂ ಪಾವತಿಸಿದ್ದೀರಿ ಮತ್ತು ನಿಮ್ಮ ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ನಲ್ಲಿ ಯಾವುದೇ ಬಾಕಿ ಮೊತ್ತವಿಲ್ಲ ಎಂದುಕೊಳ್ಳಿ. ನಿಮ್ಮ ಸ್ಟೇಟ್ಮೆಂಟ್ ದಿನಾಂಕ ಪ್ರತಿ ತಿಂಗಳ 20ರಂದು ಇರುತ್ತದೆ. ಈ ಕೆಳಕಂಡ ವಹಿವಾಟುಗಳ ಪಟ್ಟಿಯನ್ನು ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಮಾಡಿರುತ್ತೀರಿ.

ದಿನಾಂಕ	ವಿವರಗಳು	ಮೊತ್ತ
ಏಪ್ರಿಲ್10	ಗೃಹಬಳಕೆ ಉತ್ಪನ್ನಗಳ ಖರೀದಿ	₹15,000/-
ಏಪ್ರಿಲ್ 15	ಉಡುಪು ಮತ್ತು ಅಕ್ಸೆಸರಿಗಳ ಖರೀದಿ	₹5,000/-
ಏಪ್ರಿಲ್ 20	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
ಮೇ 08	ಪಾವತಿ ಬಾಕಿ ದಿನಾಂಕ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
ಮೇ 14	ದಿನಸಿ ಖರೀದಿ	₹1,000/-
ಮೇ 15	ಕಾರ್ಡ್ ಖಾತೆಗೆ ಪಾವತಿ	₹20,000/- (ಜಮಾ)

ಆದ್ದರಿಂದ ಮೇ 20ರ ದಿನಾಂಕದ ಸ್ಟೇಟ್ಮೆಂಟ್ ನಲ್ಲಿ ಈ ಕೆಳಕಂಡವು ನೀವು ಪಾವತಿಸಬೇಕಾದ ಒಟ್ಟು ಬಾಕಿಯ ಅಂಶಗಳಾಗಿ ಬಿಂಬಿಸಲ್ಪಡುತ್ತವೆ:

ಲೆಕ್ಕ ಹಾಕಿದ ಬಡ್ಡಿ= (ಬಾಕಿ ಮೊತ್ತ x 2.90%* ಪ್ರತಿ ತಿಂಗಳಿಗೆ x 12 ತಿಂಗಳು x ದಿನಗಳ ಸಂಖ್ಯೆ)365

ಆದ್ದರಿಂದ,

(a) ₹15000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಏಪ್ರಿಲ್10ರಿಂದ ಮೇ 14ರವರೆಗೆ ಬಡ್ಡಿ (ಅಂದರೆ 35 ದಿನಗಳು) = ₹500.55

(b) ₹5000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಏಪ್ರಿಲ್15ರಿಂದ ಮೇ 14ರವರೆಗೆ ಬಡ್ಡಿ (ಅಂದರೆ 30 ದಿನಗಳು) = ₹143.01

₹1000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಮೇ 14 ರಿಂದ ಮೇ 20 ರವರೆಗೆ ಬಡ್ಡಿ (ಅಂದರೆ 6 ದಿನಗಳು)= ₹5.72

ಆದ್ದರಿಂದ ಒಟ್ಟು ಬಡ್ಡಿ ₹649.28

(c) ತಡವಾಗಿ ಪಾವತಿಸಿದ ಶುಲ್ಕಗಳು = ₹750

(d) ಬಡ್ಡಿಯ @ 18% ಜಿ.ಎಸ್.ಟಿ. ಮತ್ತು ಇತರೆ ಶುಲ್ಕಗಳು= ₹251.87

(e) ಒಟ್ಟು ಬಾಕಿ ಇರುವ ಪ್ರಧಾನ ಮೊತ್ತ = ₹1000 (₹1000 ಹೊಸ ವ್ಯಯಗಳು).

(f) ಆದ್ದರಿಂದ ಒಟ್ಟು ಬಾಕಿ ಮೊತ್ತ = (a) + (b) + (c) + (d) = ₹ 2651.15

ಉದಾಹರಣೆ 3-ನಗದು ಮುಂಗಡ ವಹಿವಾಟುಗಳ ಮೇಲೆ ಬಡ್ಡಿ/ಸೇವಾ ಶುಲ್ಕಗಳು:

ನೀವು ಹಿಂದಿನ ಎಲ್ಲ ಬಾಕಿಗಳನ್ನೂ ಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಐಡಿಬಿಐ ಬ್ಯಾಂಕ್

ಕ್ರೆಡಿಟ್ ಕಾರ್ಡ್ ನಲ್ಲಿ ಯಾವುದೇ ಮೊತ್ತ ಬಾಕಿ ಇಲ್ಲ ಎಂದುಕೊಳ್ಳಿ. ನಿಮ್ಮ ಸ್ಟೇಟ್ಮೆಂಟ್ ದಿನಾಂಕವು ಪ್ರತಿ ತಿಂಗಳ 20ರಂದು. ನೀವು ನಿಮ್ಮ ಕಾರ್ಡ್ ಖಾತೆಯಲ್ಲಿ ಈ ಕೆಳಕಂಡ ವಹಿವಾಟುಗಳ ಪಟ್ಟಿಯನ್ನು ನಡೆಸಿದ್ದೀರಿ.

ಲೆಕ್ಕ ಹಾಕಿದ ಬಡ್ಡಿ=(ನಗದು ಹಿಂಪಡೆದಿರುವುದು x 2.90%* ಪ್ರತಿ ತಿಂಗಳಿಗೆ x 12 ತಿಂಗಳು x ದಿನಗಳ ಸಂಖ್ಯೆ)/ 365

ಆವರ್ತ 1: ಮಾರ್ಚ್ 21ರಿಂದ ಏಪ್ರಿಲ್ 20

ದಿನಾಂಕ	ವಹಿವಾಟಿನ ವಿಧ	ಮೊತ್ತ	ವಿವರಗಳು
ಏಪ್ರಿಲ್ 10	ಗೃಹಬಳಕೆ ವಸ್ತುಗಳ ಖರೀದಿ	₹15,000/-	ಕ್ರೆಡಿಟ್ ಕಾರ್ಡ್ ನಲ್ಲಿ ಮಾಡಲಾದ ಖರೀದಿಗಳು
ಏಪ್ರಿಲ್ 15	ಉಡುಪುಗಳು ಮತ್ತು ಅಕ್ಸೆಸರಿಗಳ ಖರೀದಿ	₹5,000/-	ಕ್ರೆಡಿಟ್ ಕಾರ್ಡ್ ನಲ್ಲಿ ಮಾಡಲಾದ ಖರೀದಿಗಳು

ಏಪ್ರಿಲ್18	ನಗದು ಹಿಂಪಡೆದಿದ್ದು	₹10,000/-	ಕ್ರೆಡಿಟ್ ಕಾರ್ಡ್ ನಲ್ಲಿ ನಗದು ಹಿಂಪಡೆದಿದ್ದು
ಏಪ್ರಿಲ್ 18	ನಗದು ಮುಂಗಡ ಶುಲ್ಕ	₹500/-	₹10,000*2.5% = ₹250 ಅದು ₹500ಕ್ಕಿಂತ ಕಡಿಮೆ
ಏಪ್ರಿಲ್ 18	ನಗದು ಮುಂಗಡ ಶುಲ್ಕಕ್ಕೆ ಜಿ.ಎಸ್.ಟಿ.	₹90/-	₹500*18% = ₹90
ಏಪ್ರಿಲ್ 20	ಬಡ್ಡಿ	₹19.07	₹10,000 ನಗದು ಹಿಂಪಡೆದಿದ್ದಕ್ಕೆ@ 2.90% ಪ್ರತಿ ತಿಂಗಳಿಗೆ ಬಡ್ಡಿ ಏಪ್ರಿಲ್ 18ರಿಂದ ಏಪ್ರಿಲ್20ರವರೆಗೆ (ಅಂದರೆ 2 ದಿನಗಳು) = ₹19.07
ಏಪ್ರಿಲ್ 20	ಬಡ್ಡಿಯ ಮೇಲೆ ಜಿ.ಎಸ್.ಟಿ.	₹3.43	₹19.07*18% = ₹3.43
ಏಪ್ರಿಲ್ 20	ಸ್ಟೇಟ್ಮೆಂಟ್ ದಿನಾಂಕ	₹30,612.50	ಒಟ್ಟು ಬಾಕಿ ಮೊತ್ತ

ಆದ್ದರಿಂದ ಏಪ್ರಿಲ್ 20ರ ದಿನಾಂಕದ ಸ್ಟೇಟ್ಮೆಂಟ್ ನಲ್ಲಿ ನೀವು ಪಾವತಿಸಬೇಕಾದ ಒಟ್ಟು ಮೊತ್ತದಲ್ಲಿ ಈ ಅಂಶಗಳು ಬಿಂಬಿತವಾಗುತ್ತವೆ:
ಏಪ್ರಿಲ್20ರಂದು ಒಟ್ಟು ಬಾಕಿ= ₹30,612.50 & ಕನಿಷ್ಠ ಬಾಕಿ ಮೊತ್ತ= ₹2112.50

ಆವರ್ತ 2: ಏಪ್ರಿಲ್ 21ರಿಂದ ಮೇ 20

ಟಿ.ಎ.ಡಿ. ಪಾವತಿಯನ್ನು ಮೇ 05ರಂದು ಮಾಡಿದ್ದೀರಿ ಎಂದುಕೊಳ್ಳಿ, ಆಗ ಮೇ 20ರಂದು ನೀಡಲಾದ ಸ್ಟೇಟ್ಮೆಂಟ್ ನಲ್ಲಿ ಈ ಕೆಳಕಂಡ ಅಂಶಗಳಿರಬಹುದು:

ದಿನಾಂಕ	ವಹಿವಾಟಿನ ವಿಧ	ಮೊತ್ತ	ವಿವರಗಳು
ಪ್ರಾರಂಭಿಕ ಬಾಕಿ		₹30,612.50	ಹಿಂದಿನ ಸ್ಟೇಟ್ಮೆಂಟ್ ನಿಂದ ಉಳಿದ ಬಾಕಿ
ಮೇ 5	ಪಾವತಿ	₹30,612.50	ಹಿಂದಿನ ಒಟ್ಟು ಬಾಕಿ ಮೊತ್ತಕ್ಕೆ ಮಾಡಲಾದ ಪಾವತಿ
ಮೇ 14	ಗೃಹಬಳಕೆ ವಸ್ತುಗಳ ಖರೀದಿ	₹1,000/-	ಕ್ರೆಡಿಟ್ ಕಾರ್ಡ್ ಮೇಲೆ ಮಾಡಲಾದ ಖರೀದಿಗಳು
ಮೇ 20	ಬಡ್ಡಿ	₹133.48	₹10,000 ನಗದು ಹಿಂಪಡೆದುದರ ಮೇಲೆ ಪ್ರತಿ ತಿಂಗಳಿಗೆ @ 2.90%ಬಡ್ಡಿ ಏಪ್ರಿಲ್ 21ರಿಂದ ಮೇ 5 (ಅಂದರೆ 14 ದಿನಗಳು)= ₹133.48
ಮೇ 20	ಬಡ್ಡಿಯ ಮೇಲೆ ಜಿ.ಎಸ್.ಟಿ.	₹24.03	₹133.48*18%= ₹24.03
ಮೇ 20	ಸ್ಟೇಟ್ಮೆಂಟ್ ದಿನಾಂಕ	₹1157.51/-	ಒಟ್ಟು ಬಾಕಿ ಮೊತ್ತ

ಹಣಕಾಸು ದಂಡಶುಲ್ಕಗಳು ಮತ್ತು ಇತರೆ ದಂಡಶುಲ್ಕಗಳು ಐಡಿಬಿಐ ಬ್ಯಾಂಕ್ ವಿವೇಚನೆಗೆ ಒಳಪಟ್ಟು ಬದಲಾಗಬಹುದಾಗಿರುತ್ತದೆ ಎನ್ನುವುದನ್ನು ದಯವಿಟ್ಟು ಗಮನಿಸಿ. ಹಾಗೂ ಕಾರ್ಡ್ ಸದಸ್ಯನು ಖಾತೆಗಳ ಸಾಲದ ಮಿತಿ ಮೀರಿದರೆ, ಖಾತೆಯ ಮೇಲೆ ಓವರ್ ಲಿಮಿಟ್ ಶುಲ್ಕಗಳನ್ನು ವಿಧಿಸಲಾಗುತ್ತದೆ. ನಿರ್ದಿಷ್ಟ ಸಂದರ್ಭಗಳಿಗೆ ವಿಧಿಸಬಹುದಾದ ದಂಡಶುಲ್ಕಗಳ ಕುರಿತು ತಿಳಿಯಲು ಈ ದಾಖಲೆಯ

ಕೊನೆಯಲ್ಲಿ ನೀಡಲಾದ ಶುಲ್ಕಗಳು ಮತ್ತು ದಂಡಶುಲ್ಕಗಳ ವಿವರಗಳ ಪಟ್ಟಿಯನ್ನು ದಯವಿಟ್ಟು ಪರಿಶೀಲಿಸಿ.

*** ಬಡ್ಡಿದರವು ಕಾರ್ಡ್ ಮಾದರಿಯಿಂದ ಕಾರ್ಡ್ ಮಾದರಿಗೆ ವ್ಯತ್ಯಾಸಗೊಳ್ಳಬಹುದು.**

3. ಮಿತಿಗಳು

(i) ಸಾಲದ ಮಿತಿ- ಐಡಿಬಿಐ ಬ್ಯಾಂಕ್ ಕಾರ್ಡ್ ದಾರರ ಮಿತಿಗಳ ಕುರಿತು ಅಂದರೆ ಸಾಲದ ಮಿತಿ ಮತ್ತು ನಗದು ಹಿಂಪಡೆಯುವ ಮಿತಿಯನ್ನು ನಿರ್ಧರಿಸುವ ಸ್ವಂತ ವಿವೇಚನೆ ಹೊಂದಿರುತ್ತದೆ. (ಆಡ್-ಆನ್ ಕಾರ್ಡ್ ಸದಸ್ಯರು ಅದೇ ಮಿತಿಯನ್ನು ಹಂಚಿಕೊಳ್ಳುತ್ತಾರೆ). ಈ ಮಿತಿಗಳು ಸ್ವಾಗತ ಪತ್ರದಲ್ಲಿ ಮತ್ತು ಮಾಸಿಕ ಸ್ಟೇಟ್ಮೆಂಟ್ ಗಳಲ್ಲಿ ಕಾರ್ಡ್ ಸದಸ್ಯರಿಗೆ ತಿಳಿಸಲಾಗುತ್ತದೆ

(ii) ಲಭ್ಯವಿರುವ ಸಾಲದ ಮಿತಿ: ಸ್ಟೇಟ್ಮೆಂಟ್ ತಯಾರಿಸುವ ಸಮಯದಲ್ಲಿನ ಸಾಲದ ಮಿತಿಯನ್ನು ಮಾಸಿಕ ಸ್ಟೇಟ್ಮೆಂಟ್ ಭಾಗವಾಗಿ ನೀಡಲಾಗುತ್ತದೆ. ಐಡಿಬಿಐ ಬ್ಯಾಂಕ್ ಕಾರ್ಡ್ ಸದಸ್ಯರ ಖಾತೆಯನ್ನು ನಿಯತಕಾಲಿಕವಾಗಿ ಪರಿಶೀಲಿಸುತ್ತದೆ ಮತ್ತು ಆಂತರಿಕ ಮಾನದಂಡ ಆಧರಿಸಿ ಕಾರ್ಡ್ ಸದಸ್ಯರ ಸಾಲದ ಮಿತಿಯನ್ನು ಕಡಿಮೆ ಮಾಡುವ ಹಕ್ಕನ್ನು ಕಾಯ್ದಿರಿಸಿಕೊಳ್ಳುತ್ತದೆ. ತಮ್ಮ ಸಾಲದ ಮಿತಿ ಹೆಚ್ಚಳ ಬಯಸುವ ಕಾರ್ಡ್ ಸದಸ್ಯರು ಅದನ್ನು ಬ್ಯಾಂಕಿಗೆ ಲಿಖಿತರೂಪದಲ್ಲಿ ಮತ್ತು ಅವರ ಅವರ ಆದಾಯವನ್ನು ಘೋಷಿಸಿ ಅರ್ಜಿ ಸಲ್ಲಿಸಬಹುದು. ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಮತ್ತು ಪೂರೈಸಲಾದ ಅಂತಹ ಹೊಸ ದಾಖಲೆಗಳನ್ನು ಆಧರಿಸಿ ಕಾರ್ಡ್ ಸದಸ್ಯನ ಸಾಲದ ಮಿತಿ ಹೆಚ್ಚಿಸಬಹುದು.

(iii) ನಗದು ಹಿಂಪಡೆಯುವ ಮಿತಿ- ನಗದು ಹಿಂಪಡೆಯುವ ಮಿತಿಯು ಗ್ರಾಹಕರು ಆಯ್ಕೆ ಮಾಡಿಕೊಳ್ಳುವ ಕಾರ್ಡ್ ಮಾದರಿ ಆಧರಿಸಿ ವ್ಯತ್ಯಾಸಗೊಳ್ಳಬಹುದು. ನಗದು ಹಿಂಪಡೆಯುವ ಮಿತಿಯು 20% ರಿಂದ 70% ಇರಬಹುದು.

ಬಿಲ್ಲಿಂಗ್ ಮತ್ತು ಪಾವತಿಗಳು

(a) ಕಾರ್ಡುದಾರರ ಖಾತೆಗೆ ಮಾಡಲಾದ ಪಾವತಿಗಳನ್ನು ಈ ಕೆಳಕಂಡ ಕ್ರಮಾಂಕದಂತೆ ಇತ್ಯರ್ಥಪಡಿಸಲಾಗುತ್ತದೆ

1. ಬಡ್ಡಿ 2. ತೆರಿಗೆಗಳು 3. ಶುಲ್ಕ 4. ನಗದು 5. ಇಎಂಐ 6. ಖರೀದಿ(ಗಳು)

(b) ಐಡಿಬಿಐ ಬ್ಯಾಂಕ್ ಕಾರ್ಡ್ ಸದಸ್ಯರಿಗೆ ಹಿಂದಿನ ಸ್ಟೇಟ್ಮೆಂಟ್ ನಂತರ ಜಮಾ ಆದ ಪಾವತಿಗಳ ಮತ್ತು ವಹಿವಾಟುಗಳನ್ನು ತೋರುವ ಮಾಸಿಕ ಸ್ಟೇಟ್ಮೆಂಟ್ ಕಳುಹಿಸುತ್ತದೆ. ಬ್ಯಾಂಕ್ ಪ್ರತಿ ತಿಂಗಳು ಪೂರ್ವ ನಿಗದಿತ ದಿನಾಂಕದಂದು ವಹಿವಾಟುಗಳ ಸ್ಟೇಟ್ಮೆಂಟ್ ಮೇಲ್/ಇ-ಮೇಲ್ ಅನ್ನು ಬ್ಯಾಂಕಿನಲ್ಲಿ ದಾಖಲಾದ ಅಂಚೆ ವಿಳಾಸ/ಇ-ಮೇಲ್ ವಿಳಾಸಕ್ಕೆ ಕಳುಹಿಸುತ್ತದೆ ಮತ್ತು ಮಿನಿ ಸ್ಟೇಟ್ಮೆಂಟ್ ಅನ್ನು ಬ್ಯಾಂಕಿನಲ್ಲಿ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್. ಆಗಿ ಮಿನಿ ಸ್ಟೇಟ್ಮೆಂಟ್ ಕಳುಹಿಸುತ್ತದೆ. ಆದಾಗ್ಯೂ ಸ್ಟೇಟ್ಮೆಂಟ್ ಸ್ವೀಕರಿಸದೇ ಇದ್ದಲ್ಲಿ ಅದು ಕಾರ್ಡುದಾರರ ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳಿಗೆ ಪರಿಣಾಮ ಬೀರುವುದಿಲ್ಲ. ಒಟ್ಟು ಬಾಕಿಯು ₹50/- ಕ್ಕಿಂತ ಕಡಿಮೆ ಇದ್ದರೆ ಮತ್ತು ಹಿಂದಿನ ಸ್ಟೇಟ್ಮೆಂಟ್ ನಂತರ ಯಾವುದೇ ವಹಿವಾಟು ಬಿಲ್ಲಿಂಗ್ ಗೆ ಬಾಕಿ ಇಲ್ಲದಿದ್ದರೆ ಯಾವುದೇ ಸ್ಟೇಟ್ಮೆಂಟ್ ನೀಡಲಾಗುವುದಿಲ್ಲ. ಕಾರ್ಡುದಾರರಿಗೆ ಅವರ ಅನುಕೂಲಕ್ಕೆ ತಕ್ಕಂತೆ ಬಿಲ್ಲಿಂಗ್ ಆವರ್ತವನ್ನು ಕನಿಷ್ಠ ಒಂದು ಬಾರಿ ಬದಲಾಯಿಸಿಕೊಳ್ಳುವ ಅವಕಾಶ ಕಲ್ಪಿಸಲಾಗುತ್ತದೆ.

(c) ಐಡಿಬಿಐ ಬ್ಯಾಂಕ್ ಕಾರ್ಡ್ ಸದಸ್ಯರಿಗೆ ರಿವಾಲ್ವಿಂಗ್ ಕ್ರೆಡಿಟ್ ಸೌಲಭ್ಯವನ್ನು ನೀಡುತ್ತದೆ. ಕಾರ್ಡ್ ಸದಸ್ಯನು ಸ್ಟೇಟ್ಮೆಂಟ್ ನಲ್ಲಿ ಮುದ್ರಿತವಾದ ಕನಿಷ್ಠ ಬಾಕಿ ಮೊತ್ತವನ್ನು ಮಾತ್ರ ಪಾವತಿಸಲು ಆಯ್ಕೆ ಮಾಡಿಕೊಳ್ಳಬಹುದು. ಬಾಕಿ ಉಳಿದ ಮೊತ್ತವನ್ನು ಮುಂದಿನ ಸ್ಟೇಟ್ಮೆಂಟ್ ಗಳಿಗೆ ವರ್ಗಾಯಿಸಲಾಗುತ್ತದೆ. ಕಾರ್ಡ್ ಸದಸ್ಯನು ಒಟ್ಟು ಬಾಕಿ ಮೊತ್ತ ಅಥವಾ ಕನಿಷ್ಠ ಬಾಕಿ ಮೊತ್ತದ ಮೇಲ್ಪಟ್ಟು ಯಾವುದೇ ಪ್ರಮಾಣದಲ್ಲಿ ಪಾವತಿಸಲು ಆಯ್ಕೆ ಮಾಡಿಕೊಳ್ಳಬಹುದು. ಅಂತಹ ಪಾವತಿಯನ್ನು ಪಾವತಿ ಬಾಕಿ ದಿನಾಂಕದ ಒಳಗಡೆ ಮಾಡಬೇಕು. ಯಾವುದೇ ತಡವಾಗಿ ಪಾವತಿಸಿದ ಶುಲ್ಕಗಳನ್ನು ತಪ್ಪಿಸಲು ಐಡಿಬಿಐ ಕ್ರೆಡಿಟ್ ಕಾರ್ಡ್ ಖಾತೆಗೆ ಬಾಕಿ ದಿನಾಂಕದಂದು ಅಥವಾ ಮುನ್ನ ಹಣಕಾಸನ್ನು ಜಮಾ ಮಾಡಬೇಕು. ಕಾರ್ಡ್ ಸದಸ್ಯರಿಗೆ ಪಾವತಿಯು ನಿಗದಿತ ಬಾಕಿ ದಿನಾಂಕದ ಒಳಗೆ ಸ್ಥಳೀಯ ಚೆಕ್ ಗಳನ್ನು ಹಾಕುವ ಮೂಲಕ ಪಾವತಿ ಮಾಡಲು ಸಲಹೆ ನೀಡಲಾಗಿದ್ದು

ಇದರಿಂದ ಪಾವತಿಯು ನಿಗದಿತ ಬಾಕಿ ದಿನಾಂಕದ ಒಳಗಡೆ ಕಾರ್ಡ್ ಖಾತೆಯಲ್ಲಿ ಪ್ರತಿಫಲಿತವಾಗುತ್ತದೆ. ಹಿಂದಿನ ಸ್ಟೇಟ್ಮೆಂಟ್ ಗಳ ಯಾವುದೇ ಪಾವತಿ ಮಾಡಲಾಗದ ಕನಿಷ್ಠ ಬಾಕಿ ಮೊತ್ತವನ್ನು ಕಾರ್ಡ್ ಸದಸ್ಯರ ಸಾಲದ ಮಿತಿಯನ್ನು ಮೀರುವ ಬಾಕಿಯೊಂದಿಗೆ ಕಾರ್ಡ್ ಸದಸ್ಯರ ಪ್ರಸ್ತುತ ಕನಿಷ್ಠ ಬಾಕಿ ಮೊತ್ತಕ್ಕೆ ಸೇರಿಸಲಾಗುತ್ತದೆ.

ಕನಿಷ್ಠ ಬಾಕಿ ಮೊತ್ತದ(ಎಂ.ಎ.ಡಿ.) ಲೆಕ್ಕ ಹಾಕುವಿಕೆಯ ಉದಾಹರಣೆ:

ಕಾರ್ಡ್ ಸದಸ್ಯನು ವಿಧಿಸಲಾದ ಎಲ್ಲ ದಂಡಶುಲ್ಕಗಳನ್ನೂ ತಕ್ಷಣವೇ ಪಾವತಿಸಬೇಕು ಎಂಬ ಪೂರ್ವಾಗ್ರಹವಿಲ್ಲದೆ ಕಾರ್ಡ್ ಸದಸ್ಯನು ಸ್ಟೇಟ್ಮೆಂಟ್ ನಲ್ಲಿ ನಮೂದಿಸಿರುವ ಬಾಕಿ ದಿನಾಂಕದಂದು ಕನಿಷ್ಠ ಬಾಕಿ ಮೊತ್ತ (ಎಂ.ಎ.ಡಿ.) ಮಾತ್ರ ಪಾವತಿಸಲು ಆಯ್ಕೆ ಮಾಡಿಕೊಳ್ಳಬಹುದು. ಕನಿಷ್ಠ ಬಾಕಿ ಮೊತ್ತವು ಒಟ್ಟು ಬಾಕಿ ಮೊತ್ತದ 5% ಆಗಿರುತ್ತದೆ ಅಥವಾ ಐಡಿಬಿಐ ಬ್ಯಾಂಕ್ ಸ್ವಂತ ವಿವೇಚನೆ ಆಧರಿಸಿ ನಿರ್ಧರಿಸಿದ ಅಂತಹ ಮತ್ತಾವುದೇ ಮೊತ್ತವಾಗಿರುತ್ತದೆ. ಕಂತುಗಳ ಮೂಲಕ ಯಾವುದೇ ಮರುಪಾವತಿ ಇದ್ದಲ್ಲಿ ಕಂತಿನ ಬಾಕಿ ಸ್ಟೇಟ್ಮೆಂಟ್ ಅವಧಿಯ ಕಂತಿನ ಬಾಕಿ ಮೊತ್ತವನ್ನು ಕನಿಷ್ಠ ಬಾಕಿ ಮೊತ್ತಕ್ಕೆ ಸೇರಿಸಲಾಗುತ್ತದೆ. ಒಟ್ಟು ಬಾಕಿಯು ಸಾಲ ಅಥವಾ ನಗದು ಮಿತಿಗಿಂತ ಹೆಚ್ಚಾಗಿದ್ದಲ್ಲಿ ಸಾಲ ಅಥವಾ ನಗದು ಮಿತಿಯ ಮೊತ್ತವು ಮೀರಿದ್ದಲ್ಲಿ ಅದು ಕನಿಷ್ಠ ಬಾಕಿ ಮೊತ್ತದಲ್ಲಿ ಸೇರಿಸಲ್ಪಡುತ್ತದೆ. ಕನಿಷ್ಠ ಬಾಕಿ ಮೊತ್ತದಲ್ಲಿ ಹಿಂದಿನ ಸ್ಟೇಟ್ಮೆಂಟ್ ಗಳ ಪಾವತಿಸದ ಕನಿಷ್ಠ ಬಾಕಿ ಮೊತ್ತ ಇದ್ದಲ್ಲಿ ಅದು ಕೂಡಾ ಒಳಗೊಂಡಿರುತ್ತದೆ. ಕನಿಷ್ಠ ಬಾಕಿ ಮೊತ್ತವನ್ನು ಪಾವತಿಸಿಯೂ ಬಾಕಿ ಪಾವತಿಯ ದಿನಾಂಕದಂದು ಒಟ್ಟು ಬಾಕಿ ಮೊತ್ತ ಪಾವತಿಸದೇ ಇದ್ದಲ್ಲಿ ಬಡ್ಡಿಯನ್ನು ವಿಧಿಸಲಾಗುತ್ತದೆ. ಗ್ರಾಹಕನು ಕ್ರೆಡಿಟ್ ಕಾರ್ಡ್ ಮರುಪಾವತಿಗೆ ಆಟೊ ಡೆಬಿಟ್ ಸೌಲಭ್ಯಕ್ಕೆ ನೋಂದಣಿ ಮಾಡಿಕೊಂಡಿದ್ದಲ್ಲಿ ಮತ್ತು ಕನಿಷ್ಠ ಬಾಕಿ ಮೊತ್ತದ ಆಯ್ಕೆ ಮಾಡಿಕೊಂಡಿದ್ದಲ್ಲಿ ಬಾಕಿ ದಿನಾಂಕದ ಮುನ್ನ ಗ್ರಾಹಕನು ಯಾವುದೇ ಹಣ ಪಾವತಿಸದೇ ಇದ್ದಲ್ಲಿ ಮಾತ್ರ ಆಗ ಅದನ್ನು ಬಾಕಿ ದಿನಾಂಕದಂದು ಕಾರ್ಯಗತಗೊಳಿಸಲಾಗುತ್ತದೆ. ಗ್ರಾಹಕನು ಬಾಕಿ ದಿನಾಂಕದ ಮುನ್ನ ಕನಿಷ್ಠ ಬಾಕಿ ಮೊತ್ತಕ್ಕಿಂತ ಕಡಿಮೆ ಮೊತ್ತ ಪಾವತಿಸಿದ್ದರೆ ವ್ಯತ್ಯಾಸದ ಮೊತ್ತವನ್ನು ಕಡಿತ ಮಾಡಲಾಗುತ್ತದೆ. ಗ್ರಾಹಕನು ಬಾಕಿ ಪಾವತಿಯ ದಿನಾಂಕದಂದು ಅಥವಾ ಮುಂಚೆ ಕನಿಷ್ಠ ಬಾಕಿ ಮೊತ್ತಕ್ಕೆ ಸಮನಾದ ಅಥವಾ ಹೆಚ್ಚಿನ ಮೊತ್ತ ಪಾವತಿಸಿದಲ್ಲಿ ಆಗ ಗ್ರಾಹಕರ ಹೊಣೆಗಾರಿಕೆ ಖಾತೆಯಂದ ಯಾವುದೇ ಹೆಚ್ಚುವರಿ ಮೊತ್ತವನ್ನು ಕಡಿತ ಮಾಡಲಾಗುವುದಿಲ್ಲ. ನೀವು ₹5,000 ಖರ್ಚು ಮಾಡಿ ಮತ್ತು ಅಷ್ಟೇ ಕನಿಷ್ಠ ಬಾಕಿ ಮೊತ್ತ (ಕನಿಷ್ಠ ಪಾವತಿ ₹100ಕ್ಕೆ ಒಳಪಟ್ಟು) ಪ್ರತಿ ತಿಂಗಳು ಮರು ಪಾವತಿಸಿದರೆ ಒಟ್ಟು ಮೊತ್ತವನ್ನು ಮರುಪಾವತಿ ಮಾಡಲು ನಿಮಗೆ 6 ವರ್ಷಗಳು ಮತ್ತು 6 ತಿಂಗಳು ತೆಗೆದುಕೊಳ್ಳುತ್ತದೆ. ಆದ್ದರಿಂದ ನಾವು ಸಲಹೆ ನೀಡುವುದೇನೆಂದರೆ ನಿಮ್ಮಲ್ಲಿ ನಗದು ಲಭ್ಯತೆ ಇರುವಾಗ ನಿಮ್ಮ ಕನಿಷ್ಠ ಬಾಕಿಗಿಂತ ಹೆಚ್ಚು ಮೊತ್ತವನ್ನು ಮರುಪಾವತಿಸಿ. ಕಾರ್ಡ್ ನಲ್ಲಿ ಬಾಕಿಗೆ ಹೋಲಿಸಿದರೆ ಕಾರ್ಡ್ ಸದಸ್ಯನು ಹೆಚ್ಚುವರಿ ಪಾವತಿ ಮಾಡಿದರೆ ಕಾರ್ಡ್ ಖಾತೆಯಲ್ಲಿ ಸಾಲದ ಬಾಕಿ ಇರುತ್ತದೆ. ಇದನ್ನು ಕಾರ್ಡ್ ನ ಮುಂದಿನ ವಹಿವಾಟುಗಳಿಗೆ ಹೊಂದಿಸಲಾಗುತ್ತದೆ. ಆದಾಗ್ಯೂ, ಈ ಹೆಚ್ಚುವರಿ ಸಾಲದ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ಕ್ಲೈಮ್ ಮಾಡುವಂತಿಲ್ಲ.

ನೀವು ನಿಮ್ಮ ಎಲ್ಲ ಹಿಂದಿನ ಬಾಕಿಗಳನ್ನೂ ಪೂರ್ಣ ಪಾವತಿಸಿದ್ದೀರಿ ಮತ್ತು ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಬಾಕಿ ಮೊತ್ತವಿಲ್ಲ ಎಂದುಕೊಳ್ಳಿ ಮತ್ತು ನಿಮ್ಮ ಮಾಸಿಕ ಸ್ಟೇಟ್ಮೆಂಟ್ ಪ್ರತಿ ತಿಂಗಳ 20ರಂದು ತಯಾರಿಸಲಾಗುತ್ತದೆ.

ವಹಿವಾಟಿನ ದಿನಾಂಕ	**ವಿಧ**	**ಜಮಾ / ಕಡಿತ**	**ಎಂ.ಎ.ಡಿ. ಕೊಡುಗೆ**	**ಮೊತ್ತ**
ಸೆಪ್ಟಂಬರ್ 25	ಖರೀದಿ	ಕಡಿತ	5%	₹5000
ಅಕ್ಟೋಬರ್ 1	ವಾರ್ಷಿಕ ಶುಲ್ಕ	ಕಡಿತ	100%	₹1499
ಅಕ್ಟೋಬರ್ 1	ನಗದು ಹಿಂಪಡೆಯುವಿಕೆ	ಕಡಿತ	5%	₹2000
ಅಕ್ಟೋಬರ್ 1	ನಗದು ಹಿಂಪಡೆಯವ ಶುಲ್ಕ	ಕಡಿತ	100%	₹500
ಅಕ್ಟೋಬರ್ 20	ನಗದು ಹಿಂಪಡೆದಿದ್ದಕ್ಕೆ ಬಡ್ಡಿ	ಕಡಿತ	100%	₹38.14

ಅಕ್ಟೋಬರ್ 20	ಜಿ.ಎಸ್.ಟಿ.	ಕಡಿತ	100%	₹366.68

ಕನಿಷ್ಠ ಬಾಕಿ ಮೊತ್ತ (ಎಂ.ಎ.ಡಿ.)ವನ್ನು ಈ ಕೆಳಕಂಡಂತೆ ಲೆಕ್ಕ ಹಾಕಲಾಗುತ್ತದೆ:

ಎಂ.ಎ.ಡಿ.= (ರೀಟೇಲ್ ವ್ಯಯಗಳು+ ನಗದು ಮುಂಗಡ) 5%+ಶುಲ್ಕಗಳು/ದಂಡಶುಲ್ಕಗಳ 100% + ಬಡ್ಡಿಯ100%/ಹಣಕಾಸು ಶುಲ್ಕಗಳು+ ಇಎಂಐ ಮೊತ್ತ+ ಜಿ.ಎಸ್.ಟಿ.

ಎಂ.ಎ.ಡಿ. = 5 %* (₹5000+ ₹2000) + 100 %* (₹1499 + ₹500) + 100% * (₹38.14 + ₹366.68) = ₹2753.82

ಕನಿಷ್ಠ ಬಾಕಿ ಮೊತ್ತವು ₹2753.82

ಕನಿಷ್ಠ ಬಾಕಿ ಮೊತ್ತ ಪಾವತಿಸದ ಪರಿಣಾಮಗಳು

ಗ್ರಾಹಕನು ಬಾಕಿ ದಿನಾಂದಂದು ಅಥವಾ ಮುನ್ನ ಕನಿಷ್ಠ ಬಾಕಿ ಮೊತ್ತ (ಎಂ.ಎ.ಡಿ.) ಪಾವತಿಸಲು ವಿಫಲನಾದಲ್ಲಿ ಗ್ರಾಹಕನಿಗೆ ತಡವಾಗಿ ಪಾವತಿಸಿದ ದಂಡಶುಲ್ಕ ಮತ್ತು ಹಣಕಾಸು/ಸೇವಾ ಶುಲ್ಕಗಳನ್ನು ಅನ್ವಯಿಸುವ ದರಗಳಂತೆ ವಿಧಿಸಲಾಗುತ್ತದೆ. ಇದಲ್ಲದೆ ಗ್ರಾಹಕನನ್ನು ಕ್ರೆಡಿಟ್ ಇನ್ಫರ್ಮೇಷನ್ ಕಂಪನಿಗಳಿಗೆ (ಸಿಐಸಿಗಳು) ತಡವಾದ ಸೂಕ್ತ ಸಂಖ್ಯೆಯ ದಿನಗಳನ್ನು ಬಾಕಿ ದಿನಾಂಕದಿಂದ ಮತ್ತು ಸಂಬಂಧಿಸಿದ ಮೊತ್ತವನ್ನು ನಮೂದಿಸಿ `ಡಿಫಾಲ್ಟರ್' ಎಂದು ವರದಿ ಮಾಡಲಾಗುತ್ತದೆ.

ಉದಾಹರಣೆ 1: ಪಾವತಿ ಬಾಕಿ ದಿನಾಂಕಕ್ಕೆ ಎಂ.ಎ.ಡಿ. ಪಾವತಿಯಾಗದ ಪಕ್ಷದಲ್ಲಿ ವಿವಿಧ ದಂಡಶುಲ್ಕಗಳನ್ನುಲೆಕ್ಕ ಹಾಕುವ ವಿಧಾನವನ್ನು ಈ ಕೆಳಕಂಡ ನಿರೂಪಣೆಯು ಸೂಚಿಸುತ್ತದೆ. ನೀವು ಹಿಂದಿನ ಎಲ್ಲ ಬಾಕಿಗಳನ್ನೂ ಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ನಲ್ಲಿ ಯಾವುದೇ ಬಾಕಿ ಮೊತ್ತವಿಲ್ಲ ಎಂದುಕೊಳ್ಳಿ. ನಿಮ್ಮ ಸ್ಟೇಟ್ಮೆಂಟ್ ದಿನಾಂಕ ಪ್ರತಿ ತಿಂಗಳ 20ರಂದು. ನಿಮ್ಮ ಕಾರ್ಡ್ ಖಾತೆಯಲ್ಲಿ ಈ ಕೆಳಕಂಡ ವಹಿವಾಟುಗಳ ಪಟ್ಟಿಯನ್ನು ನೀವು ನಡೆಸಿರುತ್ತೀರಿ.

ದಿನಾಂಕ	ವಿವರಗಳು	ಮೊತ್ತ
ಏಪ್ರಿಲ್ 10	ಗೃಹಬಳಕೆ ವಸ್ತುಗಳ ಖರೀದಿ	₹15,000/-
ಏಪ್ರಿಲ್ 15	ಉಡುಪುಗಳು ಮತ್ತು ಅಕ್ಸೆಸರಿಗಳ ಖರೀದಿ	₹5,000/-
ಏಪ್ರಿಲ್ 20	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
ಮೇ 08	ಪಾವತಿಯ ಬಾಕಿ ಮೊತ್ತ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
ಮೇ 12	ಕಾರ್ಡ್ ಖಾತೆಗೆ ಪಾವತಿ	₹2,000/- (ಜಮಾ)
ಮೇ 14	ದಿನಸಿ ಖರೀದಿ	₹1,000/-
ಮೇ 15	ಕಾರ್ಡ್ ಖಾತೆಗೆ ಪಾವತಿ	₹15,000/- (ಜಮಾ)
ಮೇ 20	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹5661.26 ಕನಿಷ್ಠ ಬಾಕಿ ಮೊತ್ತ = ₹1861.26

ಗ್ರಾಹಕ ಕನಿಷ್ಠ ಬಾಕಿಯನ್ನು ಬಾಕಿ ದಿನಾಂಕದಂದು ಅಥವಾ ಮುನ್ನ ಪಾವತಿಸದೇ ಇರುವುದರಿಂದ ಗ್ರಾಹಕನನ್ನು ಎಲ್ಲ ಸಿಐಸಿಗಳಿಗೆ `ಡಿಫಾಲ್ಟರ್' ಎಂದು ವರದಿ ಮಾಡಲಾಗುತ್ತದೆ. ಹೆಚ್ಚುವರಿಯಾಗಿ ಗ್ರಾಹಕನಿಗೆ ಈ ಕೆಳಕಂಡಂತೆ ದಂಡಶುಲ್ಕ ವಿಧಿಸಲಾಗುತ್ತದೆ:
ತಡವಾಗಿ ಪಾವತಿಸಿದ ದಂಡಶುಲ್ಕ-₹750 + ₹135 (18%

ಜಿ.ಎಸ್.ಟಿ.) = ₹885

ಹಣಕಾಸು/ಸೇವಾ ಶುಲ್ಕಗಳು-

₹15000ಕ್ಕೆ ಪ್ರತಿ ತಿಂಗಳಿಗೆ @2.90% ರಂತೆ ಏಪ್ರಿಲ್ 10ರಿಂದ

ಮೇ 11ರವರೆಗೆ ಬಡ್ಡಿ (ಅಂದರೆ 32 ದಿನಗಳಿಗೆ) = ₹457.64

₹13000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಮೇ 12ರಿಂದ ಮೇ 14ರವರೆಗೆ ಬಡ್ಡಿ (ಅಂದರೆ 3

ದಿನಗಳಿಗೆ) = ₹37.18

₹5000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಏಪ್ರಿಲ್ 15ರಿಂದ ಮೇ 14ರವರೆಗೆ ಬಡ್ಡಿ (ಅಂದರೆ 30

ದಿನಗಳಿಗೆ) = ₹143.01

₹3000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಮೇ 15ರಿಂದ ಮೇ 20ರವರೆಗೆ ಬಡ್ಡಿ (ಅಂದರೆ 5 ದಿನಗಳಿಗೆ)

= ₹14.30

₹1000ಕ್ಕೆ (ಪ್ರತಿ ತಿಂಗಳಿಗೆ @ 2.90%ರಂತೆ ಮೇ 14ರಿಂದ ಮೇ 20ರವರೆಗಿನ ಹೊಸ ವ್ಯಯಗಳು (ಅಂದರೆ 6

ದಿನಗಳು) = ₹5.72

ಆದ್ದರಿಂದ ಒಟ್ಟು ಬಡ್ಡಿಯು ₹657.85 + ₹118.41 (18% ಜಿ.ಎಸ್.ಟಿ.) = ₹776.26

ಒಟ್ಟು ಬಾಕಿ ಮೊತ್ತ= ₹4000 (₹20,000+₹1000-₹2000-₹15000) +₹885+₹776.26 = ₹5661.26

ಮೇ 20ರ ಸ್ಟೇಟ್ಮೆಂಟ್ ನಲ್ಲಿ ಕನಿಷ್ಠ ಬಾಕಿ ಮೊತ್ತವ ರೀಟೇಲ್ ಖರೀದಿಗಳು 5%/ ಒಟ್ಟು ಬಾಕಿ ಮೊತ್ತ+ 100% ಜಿ.ಎಸ್.ಟಿ.+ 100% ಬಡ್ಡಿ + 100% ತಡವಾಗಿ ಪಾವತಿಸಿದ ದಂಡಶುಲ್ಕಗಳು= ₹1861.26 (₹200 (₹4000 *5%) + ₹750+₹657.85+₹253.41 = ₹1861.26)

ಉದಾಹರಣೆ 2: ಎಂ.ಎ.ಡಿ. ಪಾವತಿ ಬಾಕಿ ದಿನಾಂಕದಂದು/ಮುನ್ನ (ಟಿ.ಎ.ಡಿ. ಪಾವತಿಸಿಲ್ಲ)

ಈ ಕೆಳಕಂಡ ನಿರೂಪಣೆಯು ಪಾವತಿಯನ್ನು ಪಾವತಿಯ ಬಾಕಿ ದಿನಾಂಕದಂದು ಅಥವಾ ಮುನ್ನ ಪಾವತಿಸಿದ್ದಲ್ಲಿ ಅಥವಾ ಕನಿಷ್ಠ ಬಾಕಿಮೊತ್ತ ಮೀರಿದ್ದಲ್ಲಿ ಆದರೆ ಒಟ್ಟು ಬಾಕಿ ಮೊತ್ತಕ್ಕಿಂತ ಕಡಿಮೆ ಇದ್ದಲ್ಲಿ ವಿವಿಧ ಶುಲ್ಕಗಳನ್ನು ಲೆಕ್ಕ ಹಾಕುವ ವಿಧಾನವನ್ನು ಸೂಚಿಸುತ್ತದೆ. ನೀವು ಹಿಂದಿನ ಎಲ್ಲ ಬಾಕಿಗಳನ್ನೂ ಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಲ್ಲಿ ಯಾವುದೇ ಬಾಕಿ ಮೊತ್ತ ಇಲ್ಲ ಎಂದು ಅಂದುಕೊಳ್ಳಿ. ನಿಮ್ಮ ಸ್ಟೇಟ್ಮೆಂಟ್ ದಿನಾಂಕ ಪ್ರತಿ ತಿಂಗಳ 20ರಂದು. ಈ ಕೆಳಕಂಡ ವಹಿವಾಟುಗಳ ಪಟ್ಟಿಯನ್ನು ನಿಮ್ಮ ಕಾರ್ಡ್ ಖಾತೆಗೆ ನೀವು ಮಾಡಿರುತ್ತೀರಿ.

ದಿನಾಂಕ	**ವಿವರಗಳು**	**ಮೊತ್ತ**
ಏಪ್ರಿಲ್ 10	ಗೃಹಬಳಕೆ ಉತ್ಪನ್ನಗಳ ಖರೀದಿ	₹15,000/-
ಏಪ್ರಿಲ್ 15	ಉಡುಪುಗಳು ಮತ್ತು ಅಕ್ಸೆಸರಿಗಳ ಖರೀದಿ	₹5,000/-
ಏಪ್ರಿಲ್ 20	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
ಮೇ 01	ಕಾರ್ಡ್ ಖಾತೆಗೆ ಪಾವತಿ	₹ 4,000/-
ಮೇ 08	ಪಾವತಿ ಬಾಕಿ ದಿನಾಂಕ	ಒಟ್ಟು ಬಾಕಿ ಮೊತ್ತ = ₹16,000/- ಕನಿಷ್ಠ ಬಾಕಿ ಮೊತ್ತ = 0
ಮೇ 14	ದಿನಸಿ ಖರೀದಿ	₹1,000/-
ಮೇ 20	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹17,793.16 ಕನಿಷ್ಠ ಬಾಕಿ ಮೊತ್ತ = ₹1643.16

ಗ್ರಾಹಕನು ಬಾಕಿ ದಿನಾಂಕದಂದು ಅಥವಾ ಮುನ್ನ ಕನಿಷ್ಠ ಬಾಕಿಯನ್ನು ಪಾವತಿಸಿರುವುದರಂದ ಗ್ರಾಹಕನನ್ನು ಸಿಐಸಿಗಳಿಗೆ `ಡಿಫಾಲ್ಟರ್' ಎಂದು ವರದಿ ಮಾಡಲಾಗುವುದಿಲ್ಲ. ಗ್ರಾಹಕನ ಮೇಲೆ ವಿಧಿಸುವ ದಂಡಶುಲ್ಕಗಳು ಈ ಕೆಳಕಂಡಂತೆ ಇರುತ್ತವೆ:

ತಡವಾಗಿ ಪಾವತಿಸಿದ ಶುಲ್ಕ-

ಶೂನ್ಯ

ಹಣಕಾಸು/ಸೇವಾ ಶುಲ್ಕಗಳು-

₹15000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಏಪ್ರಿಲ್ 10ರಿಂದ ಏಪ್ರಿಲ್ 30 (ಅಂದರೆ 21 ದಿನಗಳು)

= ₹300.33

₹11000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಮೇ 02ರಿಂದ ಮೇ 20 (ಅಂದರೆ 19 ದಿನಗಳು)

=₹199.26

₹5000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಏಪ್ರಿಲ್ 15ರಿಂದ ಮೇ 20 (ಅಂದರೆ 35 ದಿನಗಳು)

₹166.85

₹1000ಕ್ಕೆ ಪ್ರತಿ ತಿಂಗಳಿಗೆ @2.90%ರಂತೆ ಮೇ 14ರಿಂದ ಮೇ 20 (ಅಂದರೆ 6 ದಿನಗಳು) = ₹5.72

ಆದ್ದರಿಂದ ಒಟ್ಟು ಬಡ್ಡಿ ₹672.16 + ₹121.00 (18%ಜಿ.ಎಸ್.ಟಿ.) = ₹793.16

ಒಟ್ಟು ಬಾಕಿ ಮೊತ್ತ = ₹17,000 (₹20,000+₹1000 - ₹4000) +₹672.16+₹121 = ₹17,793.16

ಮೇ 20ರ ಸ್ಟೇಟ್ಮೆಂಟ್ ನಲ್ಲಿ ಕನಿಷ್ಠ ಬಾಕಿ ಮೊತ್ತವು ರೀಟೇಲ್ ಖರೀದಿಗಳು/ ಒಟ್ಟು ಬಾಕಿಯ 5%+ 100% ಜಿ.ಎಸ್.ಟಿ. + 100% ಬಡ್ಡಿ+ = ₹1643.16 (₹850 (₹17000 *5%) + ₹672.16 + ₹121 = ₹1643.16)

ಉದಾಹರಣೆ 3: ಬಾಕಿ ದಿನಾಂಕದಂದು/ಅಥವಾ ಮುನ್ನ ಎಂ.ಎ.ಡಿ. ಪಾವತಿ (ಟಿ.ಎ.ಡಿ. ಪೂರ್ಣ ಪಾವತಿಸಿದ್ದು)

ಒಟ್ಟು ಬಾಕಿ ಮೊತ್ತವನ್ನು ಪಾವತಿಯ ಅಂತಿಮ ದಿನಾಂಕದೊಳಗೆ ಪಾವತಿಸಿದರೆ, ವಿವಿಧ ಶುಲ್ಕಗಳನ್ನು ಲೆಕ್ಕಾಚಾರ ಮಾಡುವ ವಿಧಾನವನ್ನು ಈ ಕೆಳಗಿನ ವಿವರಣೆಯು ಸೂಚಿಸುತ್ತದೆ. ನೀವು ಹಿಂದಿನ ಎಲ್ಲಾ ಬಾಕಿಗಳನ್ನು ಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಲ್ಲಿ ಯಾವುದೇ ಬಾಕಿ ಮೊತ್ತವಿಲ್ಲ ಎಂದು ಭಾವಿಸಿರಿ. ನಿಮ್ಮ ಸ್ಟೇಟ್ಮೆಂಟ್ ದಿನಾಂಕವು ಪ್ರತಿ ತಂಗಳ 20ರಂದು. ಈ ಕೆಳಕಂಡ ವಹಿವಾಟುಗಳ ಪಟ್ಟಿಯನ್ನು ನಿಮ್ಮ ಕಾರ್ಡ್ ಖಾತೆಯಲ್ಲಿ ನೀವು ಮಾಡಿರುತ್ತೀರಿ.

ದಿನಾಂಕ	ವಿವರಗಳು	ಮೊತ್ತ
ಏಪ್ರಿಲ್ 10	ಗೃಹಬಳಕೆ ವಸ್ತುಗಳ ಖರೀದಿ	₹15,000/-
ಏಪ್ರಿಲ್ 15	ಉಡುಪು ಮತ್ತು ಅಕ್ಸೆಸರಿಗಳ ಖರೀದಿ	₹5,000/-
ಏಪ್ರಿಲ್ 20	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹20,000/- ಕನಿಷ್ಠ ಬಾಕಿ ಮೊತ್ತ = ₹1,000/-
ಮೇ 01	ಕ್ರೆಡಿಟ್ ಕಾರ್ಡ್ ಖಾತೆಗೆ ಪಾವತಿ	₹ 20,000/-
ಮೇ 08	ಪಾವತಿ ಬಾಕಿ ದಿನಾಂಕ	ಒಟ್ಟು ಬಾಕಿ ಮೊತ್ತ = 0 ಕನಿಷ್ಠ ಬಾಕಿ ಮೊತ್ತ = 0
ಮೇ 14	ದಿನಸಿ ಖರೀದಿ	₹1,000/-
ಮೇ 20	ಸ್ಟೇಟ್ಮೆಂಟ್ ದಿನಾಂಕ	ಒಟ್ಟು ಬಾಕಿ ಮೊತ್ತ = ₹1000 ಕನಿಷ್ಠ ಬಾಕಿ ಮೊತ್ತ = ₹50

ಮೇ 20ರವರೆಗೆ ಮತ್ತಾವುದೇ ಪಾವತಿ ಮಾಡಿಲ್ಲ (ಅಂದರೆ ಮುಂದಿನ ಸ್ಟೇಟ್ಮೆಂಟ್ ದಿನಾಂಕ). ಕಾರ್ಡ್ ಮೇಲೆ ಬಡ್ಡಿದರ ಪ್ರತಿ ತಿಂಗಳಿಗೆ 2.90% ಎಂದುಕೊಂಡಲ್ಲಿ ಬಡ್ಡಿ ಮತ್ತು ದಂಡಶುಲ್ಕಗಳನ್ನು ಈ ಕೆಳಗಿನಂತೆ ವಿಧಿಸಲಾಗುತ್ತದೆ:

i) ಬಡ್ಡಿ ದಂಡಶುಲ್ಕಗಳು-ಶೂನ್ಯ ii) ಜಿ.ಎಸ್.ಟಿ. ಶುಲ್ಕಗಳು- ಶೂನ್ಯ iii) ಒಟ್ಟು ಬಾಕಿ ಮೊತ್ತ = ₹1,000 ಆದ್ದರಿಂದ, ಮೇ 20ರ ಸ್ಟೇಟ್ಮೆಂಟ್ ಒಟ್ಟು ಬಾಕಿ ಮೊತ್ತವು (i) + (ii) + (iii) = ₹1,000

(d) ಪಾವತಿಯು ಬಾಕಿ ಪಾವತಿಯ ದಿನಾಂಕಕ್ಕೆ ಮುನ್ನ ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಖಾತೆಗೆ ಜಮಾ ಆಗದೇ ಇದ್ದಲ್ಲಿ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಕಾರ್ಡ್ ಅನ್ನು ಮತ್ತಷ್ಟು ಬಳಸದಂತೆ ನಿರ್ಬಂಧಿಸಬಹುದು.

(e) ಕಾರ್ಡ್ ಬಾಕಿಗೆ ಮಾಡಲಾದ ಪಾವತಿಗಳನ್ನು ನಂತರದ ಸ್ಟೇಟ್ಮೆಂಟ್ ನಲ್ಲಿ ನಮೂದಿಸಿರಲಾಗುತ್ತದೆ.

(f) ಕಾರ್ಡ್ ಸದಸ್ಯರು ನೀಡಿರುವ ಯಾವುದೇ ಪಾವತಿಯ ಸೂಚನೆಯು ಅಮಾನ್ಯಗೊಂಡಲ್ಲಿ ಕಾರ್ಡ್ ಸೌಲಭ್ಯಗಳು ಅಮಾನತು/ರದ್ದಾಗಬಹುದು ಮತ್ತು ನಿಗದಿತ ಶುಲ್ಕಗಳು ಮತ್ತು ದಂಡಶುಲ್ಕಗಳಲ್ಲಿ ನಮೂದಿಸಿದಂತೆ ಕಾರ್ಡ್ ಖಾತೆಗೆ ಬ್ಯಾಂಕಿನ ಸ್ವಂತ ವಿವೇಚನೆಯ ಅನುಸಾರ ಶುಲ್ಕ ವಿಧಿಸಬಹುದು. ಅಂತಹ ಶುಲ್ಕದ ಮೊತ್ತವು ಬ್ಯಾಂಕಿನ ಸ್ವಂತ ವಿವೇಚನೆಗೆ ಒಳಪಟ್ಟು ಬದಲಾಗಬಹುದಾಗಿದೆ. ಬ್ಯಾಂಕ್ ಯಾವುದೇ ಸೂಕ್ತ ಕಾನೂನು ಕ್ರಮ ಜರುಗಿಸುವ ಹಕ್ಕು ಕಾಯ್ದಿರಿಸಿಕೊಂಡಿರುತ್ತದೆ.

(g) ಕಾರ್ಡ್ ಸದಸ್ಯರಿಗೆ ಬ್ಯಾಂಕ್ ನಕಲಿ ಮಾಸಿಕ ಖಾತೆಯ ಸ್ಟೇಟ್ಮೆಂಟ್ ಗಳನ್ನು ಅಂತಹ ಕೋರಿಕೆ ಸ್ವೀಕರಿಸಿದ ಹಿಂದಿನ ಹನ್ನೆರಡು ತಿಂಗಳ ಅವಧಿಯವರೆಗೆ ಮಾತ್ರ ನೀಡುತ್ತದೆ, ಅಂತಹ ಪಾವತಿಯು ಶುಲ್ಕಗಳು ಮತ್ತು ದಂಡಶುಲ್ಕಗಳ ವಿವರ ಪಟ್ಟಿಯಲ್ಲಿ ನಮೂದಿಸಿದಂತೆ ಸೇವಾ ಶುಲ್ಕಕ್ಕೆ ಒಳಪಟ್ಟಿರುತ್ತದೆ ಮತ್ತು ಅದನ್ನು ಬ್ಯಾಂಕ್ ವಿವೇಚನೆಯಂತೆ ವಿಧಿಸುತ್ತದೆ.

(h) ನಿಮ್ಮ ಸಂವಹನ ವಿಳಾಸ/ಇ-ಮೇಲ್ ವಿಳಾಸ/ ಮೊಬೈಲ್ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ನೀವು ಅದನ್ನು ತಕ್ಷಣವೇ ಬ್ಯಾಂಕಿಗೆ ಸಂಪರ್ಕಿಸಬೇಕು ಮತ್ತು ಅಪ್ಡೇಟ್ ಮಾಡಲು ಸಲಹೆ ನೀಡಲಾಗುತ್ತದೆ ಇದರಿಂದ ನೀವು ನಿಯಮಿತವಾಗಿ ಮತ್ತು ಸಕಾಲಕ್ಕೆ ಸ್ಟೇಟ್ಮೆಂಟ್ ಗಳನ್ನು ಸ್ವೀಕರಿಸುತ್ತೀರಿ.

(i) ನಿಮ್ಮ ಕಾರ್ಡ್ ಖಾತೆಗೆ ಮಾಡುವ ಪಾವತಿಗಳನ್ನು ಈ ಕೆಳಕಂಡ ಯಾವುದೇ ವಿಧಾನಗಳಲ್ಲಿ ಮಾಡಬಹುದು:

1. ಆಟೊ-ಡೆಬಿಟ್ ಸೌಲಭ್ಯ- ಐಡಿಬಿಐ ಬ್ಯಾಂಕಿಗೆ ಬಾಕಿ ಇರುವ ಒಟ್ಟು ಮೊತ್ತ/ಕನಿಷ್ಠ ಮೊತ್ತವನ್ನು ನೇರವಾಗಿ ನಿಮ್ಮ ಐಡಿಬಿಐ ಉಳಿತಾಯ/ಚಾಲ್ತಿ ಖಾತೆಯಿಂದ ಪ್ರತಿ ತಿಂಗಳು ಕಡಿತ ಮಾಡಿಕೊಳ್ಳಲು ಮತ್ತು ನಿಮ್ಮ ಕಾರ್ಡ್ ಖಾತೆಗೆ ಜಮಾ ಮಾಡಲು ಅನುಮತಿ ನೀಡುವುದು.

2. ನೆಟ್-ಬ್ಯಾಂಕಿಂಗ್- ನಿಮ್ಮ ಕ್ರೆಡಿಟ್ ಕಾರ್ಡ್ ಬಾಕಿಗಳನ್ನು ನಿಮ್ಮ ಐಡಿಬಿಐ ಬ್ಯಾಂಕ್ ಉಳಿತಾಯ/ಚಾಲ್ತಿ ಖಾತೆಯಿಂದ ನೇರವಾಗಿ ಐಡಿಬಿಐ ಬ್ಯಾಂಕ್ ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸುವುದು.
3. ಎನ್.ಇ.ಎಫ್.ಟಿ.- ಎನ್.ಇ.ಎಫ್.ಟಿ. ಸೌಲಭ್ಯ ನೀಡುವ ಇತರೆ ಬ್ಯಾಂಕ್ ಖಾತೆಯನ್ನು ನಿಮ್ಮ ಐಡಿಬಿಐ ಕ್ರೆಡಿಟ್ ಕಾರ್ಡ್ ಬಿಲ್ ಅನ್ನು ಆನ್ಲೈನ್ ನಲ್ಲಿ ಪಾವತಿಸಲು ಬಳಸಿ. ಐ.ಎಫ್.ಎಸ್.ಸಿ. ಕೋಡ್ "IBKL0NEFT01" ಅನ್ನು ಬಳಸಿ ಮತ್ತು ಬ್ಯಾಂಕ್ ಅನ್ನು "IDBI Bank Ltd." ಎಂದು ಸೇರಿಸಿ ಮತ್ತು ಕ್ರೆಡಿಟ್ ಕಾರ್ಡ್ ಸಂಖ್ಯೆಯನ್ನು ಫಲಾನುಭವಿ ಖಾತೆಯ ಸಂಖ್ಯೆಯನ್ನಾಗಿ ನಮೂದಿಸಿ.
4. **ಚೆಕ್/ ಡ್ರಾಫ್ಟ್- ನಿಮ್ಮ ಚೆಕ್/ಡ್ರಾಫ್ಟ್ ಅನ್ನು ಐಡಿಬಿಐ ಬ್ಯಾಂಕ್ ಶಾಖೆಗಳು ಮತ್ತು ಎಟಿಎಂಗಳಲ್ಲಿ ಇರಿಸಿರುವ ಯಾವುದೇ ಐಡಿಬಿಐ ಬ್ಯಾಂಕ್ ಡ್ರಾಪ್ ಬಾಕ್ಸ್ ಗಳಲ್ಲಿ ಹಾಕಿರಿ. ಚೆಕ್/ಡ್ರಾಫ್ಟ್ ಅನ್ನು ಐಡಿಬಿಐ ಬ್ಯಾಂಕ್ <ಕಾರ್ಡ್ ನಲ್ಲಿ ನಮೂದಾಗಿರುವ ಹೆಸರು> ಕಾರ್ಡ್ ಸಂಖ್ಯೆ** xxxx-xxxx-xxxx-xxxx ಪಾವತಿಸುವಂತೆ ಮಾಡಬೇಕು.

5. ನಗದು- ಯಾವುದೇ ಐಡಿಬಿಐ ಬ್ಯಾಂಕ್ ಶಾಖೆಗೆ ಪ್ರವೇಶಿಸಿ ಮತ್ತು ಕ್ರೆಡಿಟ್ ಕಾರ್ಡ್ ಬಾಕಿಯನ್ನು ಕಾರ್ಡ್ ಸಂಖ್ಯೆ, ಮೊತ್ತ ಹಾಗೂ ಸಂಪರ್ಕ ಸಂಖ್ಯೆಯನ್ನು ಪೇ ಇನ್ ಸ್ಲಿಪ್ ನಲ್ಲಿ ನಮೂದಿಸಿ ಕ್ರೆಡಿಟ್ ಕಾರ್ಡ್ ಬಾಕಿಯನ್ನು ಪಾವತಿಸಿ.

6. ಐಪೇ- ಇತರೆ ಬ್ಯಾಂಕ್ ಖಾತೆಯಿಂದ ನೇರವಾಗಿ ನಿಮ್ಮ ಕಾರ್ಡ್ ಖಾತೆಗೆ ಆನ್ಲೈನ್ ಮೂಲಕ ಪಾವತಿಸಿ.

7. ವಿಸಾ ಮನಿ ಟ್ರಾನ್ಸ್ ಫರ್ – ವಿಸಾ ಫ್ರಾಂಚೈಸೀ ಕಾರ್ಡ್ ಗಳಾದರೆ ವಿಸಾ ಮನಿ ಟ್ರಾನ್ಸ್ ಫರ್ ಬಳಸಿ ಇತರೆ ಬ್ಯಾಂಕ್ ಖಾತೆಯಿಂದ ಆನ್ಲೈನ್ ಮೂಲಕ ಪಾವತಿಸಿ. ವಿಸಾ ಮನಿ ಟ್ರಾನ್ಸ್ ಫರ್ ಗೆ ಶುಲ್ಕವನ್ನು ಪಾವತಿಸುವ ಬ್ಯಾಂಕ್ ವಿಧಿಸುತ್ತದೆ.

ಸೂಚನೆ: ಕಾರ್ಡ್ ದಾರರಿಗೆ ಪಾವತಿಯ ಬಾಕಿ ದಿನಾಂಕಕ್ಕಿಂತ ಮುಂಚಿತವಾಗಿ ಹಣ ಪಾವತಿಸಲು ಸಲಹೆ ನೀಡಲಾಗುತ್ತದೆ ಇದರಿಂದ ಪಾವತಿಯ ಸಾಲವು ಪಾವತಿಯ ಬಾಕಿ ದಿನಾಂಕದಂದು/ಮುಂಚಿತವಾಗಿಯೇ ಪ್ರತಿಫಲಿತವಾಗುತ್ತದೆ. ಕಾರ್ಡ್ ದಾರರು ಕ್ರೆಡಿಟ್ ಕಾರ್ಡ್ ಬಾಕಿಯನ್ನು ಮೇಲೆ ನಮೂದಿಸಲಾದ ವಿಧಾನಗಳ ಮೂಲಕ ಪಾವತಿಸಲು ಸೂಚಿಸಲಾಗಿದೆ. ಐಡಿಬಿಐ ಬ್ಯಾಂಕ್ ಮಾನ್ಯತೆ ಪಡೆಯದ ಯಾವುದೇ 3ನೇ ಪಕ್ಷದ ಆಪ್ ಗಳು ಒಳಗೊಂಡು ಇತರೆ ವಿಧಾನ/ಮಾರ್ಗದ ಮೂಲಕ ಮಾಡಲಾದ ಪಾವತಿಯು ಕ್ಲಿಯರೆನ್ಸ್ ಗೆ ಹೆಚ್ಚಿನ ಟಿ.ಎ.ಟಿ. ಹೊಂದಿರಬಹುದು. ಕಾರ್ಡ್ ಮಾದರಿಯ ಮೇಲೆ ಶುಲ್ಕಗಳು ಅನ್ವಯಿಸುತ್ತಿದ್ದು ಹಣಕಾಸನ್ನು ಬಾಕಿ ದಿನಾಂಕದ ಒಳಗಡೆ ಸ್ವೀಕರಿಸದೇ ಇದ್ದಲ್ಲಿ ಅನ್ವಯಿಸುತ್ತವೆ. ಮಾನ್ಯತೆ ಇಲ್ಲದ ಮಾರ್ಗಗಳ ಮೂಲಕ ಕಾರ್ಡ್ ಗೆ ಮಾಡಲಾದ ತಡವಾದ/ ಪ್ರತಿಫಲಿತಾಗದ ಪಾವತಿಯಿಂದ ಎದುರಾಗುವ ಯಾವುದೇ ವಿಚಾರಣೆಗಳಿಗೆ ಗ್ರಾಹಕರು ನೇರವಾಗಿ ಆಯಾ ಚಾನೆಲ್ ಗಳನ್ನೇ ಸಂಪರ್ಕಿಸಬೇಕಾಗುತ್ತದೆ.

(j) ಬಿಲ್ಲಿಂಗ್ ವಿವಾದಗಳು: ಕಾರ್ಡ್ ಸದಸ್ಯನು ಸ್ಟೇಟ್ಮೆಂಟ್ ದಿನಾಂಕದ 60 ದಿನಗಳ ಒಳಗೆ ಯಾವುದೇ ವ್ಯತ್ಯಾಸಗಳ ಕುರಿತು ಐಡಿಬಿಐ ಬ್ಯಾಂಕ್ ಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡದೇ ಹೋದಲ್ಲಿ ಸ್ಟೇಟ್ಮೆಂಟ್ ನಲ್ಲಿರುವ ಎಲ್ಲ ಅಂಶಗಳೂ ಸರಿ ಮತ್ತು ಒಪ್ಪಿಕೊಳ್ಳಲಾಗಿದೆ ಎಂದು ಪರಿಗಣಿಸಲಾಗುತ್ತದೆ:

- **ಅಂಚೆ ಮೂಲಕ: ಮ್ಯಾನೇಜರ್, ಐಡಿಬಿಐ ಬ್ಯಾಂಕ್ ಲಿಮಿಟೆಡ್, ಸಿಪಿಯು- ಕ್ರೆಡಿಟ್ ಕಾರ್ಡ್ಸ್ ಡಿವಿಷನ್, ಐಡಿಬಿಐ ಬಿಲ್ಡಿಂಗ್, 3ನೇ ಮಹಡಿ, ಪ್ಲಾಟ್ ನಂ: 39/40/41, ಸೆಕ್ಟರ್-11, ಸಿಬಿಡಿ-ಬೆಲಾಪುರ್, ನವಿ ಮುಂಬೈ, ಪಿನ್- 400614.**
- ಇಮೇಲ್ ಮೂಲಕ: customercare@idbi.co.in

ಅಂತಹ ಮಾಹಿತಿ ಪಡೆದ ನಂತರ ಐಡಿಬಿಐ ಬ್ಯಾಂಕ್ ತನಿಖೆ ಬಾಕಿ ಇರುವವರೆಗೆ ಅಂತಹ ಶುಲ್ಕವನ್ನು ತಾತ್ಕಾಲಿಕವಾಗಿ ಹಿಂದಿರುಗಿಸಬಹುದು. ನಂತರದ ತನಿಖೆಗಳು ಪೂರ್ಣಗೊಂಡ ನಂತರ ಅಂತಹ ದಂಡಶುಲ್ಕಗಳ ಬಾಧ್ಯತೆಯು ಕಾರ್ಡ್ ಸದಸ್ಯನ ಖಾತೆಯಲ್ಲಿದ್ದರೆ ದಂಡಶುಲ್ಕವನ್ನು ಮುಂದಿನ ಸ್ಟೇಟ್ಮೆಂಟ್ ನಲ್ಲಿ ಮರು ಪಡೆಯುವಿಕೆಯ ಶುಲ್ಕಗಳೊಂದಿಗೆ ಮರು ನಮೂದಿಸಲಾಗುತ್ತದೆ.

(k) **ಸಂಪರ್ಕದ ವಿವರಗಳು: ಕಾರ್ಡ್ ಸದಸ್ಯನು ಯಾವುದೇ ವಿಚಾರಣೆಗಳಿಗೆ ಅಥವಾ ಯಾವುದೇ ದೂರು ಪರಿಹಾರಕ್ಕೆ ಈ ಮೂಲಕ ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಗಳನ್ನು ಸಂಪರ್ಕಿಸಬಹುದು:**

- 24 ಗಂಟೆ ಕ್ರೆಡಿಟ್ ಕಾರ್ಡ್ ಕಸ್ಟಮರ್ ಕೇರ್ ನಂಬರ್- 1800-209-4324 / 1800-22-1070 (ಟೋಲ್ ಫ್ರೀ) / 022 67719100 (ನಾನ್-ಟೋಲ್ ಫ್ರೀ)
- **ಅಂಚೆ ಮೂಲಕ- ಮ್ಯಾನೇಜರ್, ಐಡಿಬಿಐ ಬ್ಯಾಂಕ್ ಲಿ. ಸಿಪಿಯು- ಕ್ರೆಡಿಟ್ ಕಾರ್ಡ್ಸ್ ಡಿವಿಷನ್, ಐಡಿಬಿಐ ಬಿಲ್ಡಿಂಗ್, 3ನೇ ಮಹಡಿ, ಪ್ಲಾಟ್ ನಂ: 39/40/41, ಸೆಕ್ಟರ್-11, ಸಿಬಿಡಿ ಬೆಲಾಪುರ್, ನವಿ ಮುಂಬೈ, ಪಿನ್-**400614.
- **ಇಮೇಲ್ ಮೂಲಕ** - customercare@idbi.co.in

4. **ಡಿಫಾಲ್ಟ್ ಮತ್ತು ಸನ್ನಿವೇಶಗಳು**

- ಕಾರ್ಡ್ ಸದಸ್ಯನು ಬಿಲ್ಲಿಂಗ್ ಸ್ಟೇಟ್ಮೆಂಟ್ ನಲ್ಲಿ ಸೂಚಿಸಿದ ಬಾಕಿ ದಿನಾಂಕದಂದು ಕನಿಷ್ಠ ಬಾಕಿ ಮೊತ್ತ ಪಾವತಿಸಲು ವಿಫಲನಾದರೆ, ಅದನ್ನು ಅವಧಿ ಮೀರಿದ ಬಾಕಿ ಎಂದು ಪರಿಗಣಿಸಲಾಗುತ್ತದೆ. ಅಂತಹ ಪ್ರಕರಣದಲ್ಲಿ ಕಾರ್ಡ್ ಸದಸ್ಯನು ಮುಂದಿನ ಬಿಲ್ಲಿಂಗ್ ದಿನಾಂಕಕ್ಕೂ ಪಾವತಿಸದೇ ಇದ್ದಲ್ಲಿ ಬ್ಯಾಂಕ್ ಡಿಫಾಲ್ಟ್ ವರದಿಯನ್ನು ಕ್ರೆಡಿಟ್ ಇನ್ಫರ್ಮೇಷನ್ ಬ್ಯೂರೋಗೆ ಅಥವಾ ಕಾನೂನು ಅನುಮೋದಿಸಿದ ಅಂತಹ ಇತರೆ ಏಜೆನ್ಸಿಗಳಿಗೆ ಕಳುಹಿಸಬಹುದು. ಎರಡು ಬಿಲ್ಲಿಂಗ್ ದಿನಾಂಕಗಳ ನಡುವಿನ ಸಮಯದ ಅವಧಿಯನ್ನು ಕಾರ್ಡ್ ಸದಸ್ಯನು ಡಿಫಾಲ್ಟರ್ ಆಗಿ ವರದಿ ಮಾಡಲು ನೋಟಿಸ್ ಅವಧಿ ಎಂದು ಪರಿಗಣಿಸಲಾಗುತ್ತದೆ.
- ಕಾರ್ಡ್ ದಾರರ ಒಪ್ಪಂದ/ ಬಹಳ ಮುಖ್ಯವಾದ ನಿಯಮ ಹಾಗೂ ನಿಬಂಧನೆಗಳ ಯಾವುದೇ ಅನುಬಂಧಗಳಲ್ಲಿ ಯಾವುದೇ ಅಸಮಂಜಸತೆಯ ಹೊರತಾಗಿಯೂ ಕಾರ್ಡ್ ದಾರನು 90 ದಿನಗಳಲ್ಲಿ ಕನಿಷ್ಠ ಬಾಕಿ ಮೊತ್ತವನ್ನು ಪಾವತಿಸದೇ ಇದ್ದಲ್ಲಿ ಐಡಿಬಿಐ ಬ್ಯಾಂಕ್ ಈ ಒಪ್ಪಂದದ ಅಡಿಯಲ್ಲಿ ನೀಡಿರುವ ಕ್ರೆಡಿಟ್ ಕಾರ್ಡ್ ಸೇವೆಯು ರದ್ದಾಗುತ್ತದೆ, ಆದಾಗ್ಯೂ ಕಾರ್ಡ್ ದಾರನು 90 ದಿನಗಳ ಪಾವತಿಸದ ಮೊತ್ತ ಹಾಗೂ ಐಡಿಬಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆ ಮತ್ತು ಆಯ್ಕೆಯಿಂದ ಮತ್ತು ವಿವಿಧ ಆಂತರಿಕ ನೀತಿಗಳು ಮತ್ತು ಪ್ರಕ್ರಿಯೆಗಳ ಅನ್ವಯ ವಿಧಿಸುವ 90 ದಿನಗಳನಂತರ ಪಾವತಿಯ ಬಾಕ ದಿನಾಂಕದ ನಂತರ ವಿಧಿಸುವ ಯಾವುದೇ ಹಣಕಾಸು ಶುಲ್ಕಗಳು/ತಡವಾದ ಪಾವತಿಯ ಬಡ್ಡಿ ಒಳಗೊಂಡ ಮೊತ್ತವನ್ನು ಪಾವತಿಸಲು ಹೊಣೆಗಾರನಾಗಿ ಮುಂದುವರಿಯುತ್ತಾನೆ.
- ಕಾರ್ಡ್ ಬಾಕಿಯನ್ನುಬಾಕಿ ದಿನಾಂಕಗಳಂದು/ ಕಾರ್ಡ್ ದಾರರ ಒಪ್ಪಂದದಲ್ಲಿ ಒಪ್ಪಿಕೊಂಡಂತೆ ಪಾವತಿಸಬೇಕು ಎಂದು ನಿರೀಕ್ಷಿಸಲಾಗುತ್ತದೆ. ಅದನ್ನು ತಪ್ಪಿದಲ್ಲಿ ಕಾರ್ಡ್ ದಾರನಿಗೆ ಕಾಲಕಾಲಕ್ಕೆ ಯಾವುದೇ ಬಾಕಿ ಇರುವ ಕ್ರೆಡಿಟ್ ಕಾರ್ಡ್ ಖಾತೆಗೆ ಕಾಲಕಾಲಕ್ಕೆ ಅಂಚೆ, ಫ್ಯಾಕ್ಸ್ ಟೆಲಿಫೋನ್, ಇ-ಮೇಲ್, ಎಸ್.ಎಂ.ಎಸ್ ಸಂದೇಶ ಮತ್ತು/ಅಥವಾ ಸಂಗ್ರಹದ ಉದ್ದೇಶಕ್ಕೆ ನೇಮಕವಾದ ಮೂರನೇ ವ್ಯಕ್ತಿಗಳಿಂದ ನೆನಪಿಸಲಾಗುತ್ತದೆ, ಫಾಲೋ-ಅಪ್ ಮತ್ತು ಬಾಕಿ ಸಂಗ್ರಹ ಮಾಡಲಾಗುತ್ತದೆ. ಹಾಗೆ ನೇಮಕವಾದ ಮೂರನೇ ವ್ಯಕ್ತಿಯು ಭಾರತೀಯ ಬ್ಯಾಂಕ್ ಗಳ ಸಂಘಟನೆ (ಐಬಿಎ)ಯ ಸಾಲ ಸಂಗ್ರಹದ ನಿಯಮಗಳಿಗೆ ಬದ್ಧರಾಗಿರುತ್ತಾರೆ. ಬ್ಯಾಂಕ್ ಕಾರ್ಡ್ ಸದಸ್ಯನನ್ನು ಸಂಪರ್ಕಿಸಲು ವಿಫಲವಾದರೆ ಮನೆ/ಕಛೇರಿ/ಫೋನ್ ಮೂಲಕ ಲಭ್ಯವಿರುವ ಸಂಗಾತಿ/ಪೋಷಕ/ಮತ್ತಾವುದೇ ವಯಸ್ಕ ಕುಟುಂಬ ಸದಸ್ಯ/ಕಾರ್ಯದರ್ಶಿ/ಅಕೌಂಟೆಂಟ್)ಯನ್ನು ಸಂಪರ್ಕಿಸಿ ಸಂದೇಶ ನೀಡಲಾಗುತ್ತದೆ.

ಕಾರ್ಡ್ ದಾರನ ಮರಣದಸಂದರ್ಭದಲ್ಲಿ ಬಾಕಿ ವಸೂಲಿ:

- ಒಟ್ಟು ಬಾಕಿ ಇರುವ ಮೊತ್ತ (ಬಿಲ್ ಆಗದ ವಹಿವಾಟುಗಳು ಸೇರಿ) ತಕ್ಷಣವೇ ಬಾಕಿಯಾಗುತ್ತವೆ ಮತ್ತು ಐಡಿಬಿಐ ಬ್ಯಾಂಕ್ ಗೆ ಪಾವತಿಸಬೇಕಾಗುತ್ತದೆ.
- ಐಡಿಬಿಐ ಬ್ಯಾಂಕ್ ಒಟ್ಟು ಬಾಕಿಯನ್ನು ಕಾರ್ಡ್ ದಾರನ ಸ್ಥಿರಾಸ್ತಿಯಿಂದ ವಸೂಲಿ ಮಾಡಲು ಅರ್ಹತೆ ಪಡೆಯುತ್ತದೆ.
- ಭಾರತೀಯ ರಿಜರ್ವ್ ಬ್ಯಾಂಕ್ ಮಾರ್ಗಸೂಚಿಗಳ ಪ್ರಕಾರ ನಾವು ನಮ್ಮ ಕ್ರೆಡಿಟ್ ಕಾರ್ಡ್ ದಾರರಿಗೆ ಸಂಬಂಧಿಸಿದ ಮಾಹಿತಿಯನ್ನು ಕ್ರೆಡಿಟ್ ಇನ್ಫರ್ಮೇಷನ್ ಬ್ಯೂರೋ (ಇಂಡಿಯಾ) ಲಿಮಿಟೆಡ್ (ಸಿಬಿಲ್)ಗೆ ಮಾಸಿಕ ಆಧಾರದಲ್ಲಿ ನೀಡುತ್ತಿರುತ್ತೇವೆ. ಈ ನೀಡಲಾದ ಮಾಹಿತಿಯು ಹಿಂದಿನ ತಿಂಗಳ ಬಾಕಿಯನ್ನು ಪ್ರತಿಫಲಿಸುತ್ತದೆ ಮತ್ತು ಅದರಲ್ಲಿ ಕ್ರೆಡಿಟ್ ಕಾರ್ಡ್ ಖಾತೆಯು ನಿಯಮಿತವಾಗಿದೆಯೇ ಅಥವಾ ರದ್ದಾಗಿದೆಯೇ ಎನ್ನುವುದು ಒಳಗೊಂಡಿರುತ್ತದೆ. ಪಾವತಿಗಳು ಬಾಕಿ ದಿನಾಂಕ ಮೀರದೇ ಇದ್ದಲ್ಲಿ ಕ್ರೆಡಿಟ್ ಕಾರ್ಡ್ ಖಾತೆಗಳ ಬಾಕಿ ಪಾವತಿಗೆ 3 ದಿನಗಳ ಹೆಚ್ಚುವರಿ ದಿನಗಳು ಲಭ್ಯವಿರುತ್ತದೆ. ಪಾವತಿಯ ಬಾಕಿ ದಿನಾಂಕವು ಕ್ರೆಡಿಟ್ ಕಾರ್ಡ್ ಸ್ಟೇಟ್ಮೆಂಟ್ ನಲ್ಲಿ ನಮೂದಿಸಿದ ದಿನಾಂಕವಾಗಿದ್ದು ಆ ದಿನಾಂಕಕ್ಕೆ ಕ್ರೆಡಿಟ್ ಕಾರ್ಡ್ ಖಾತೆಗೆ ಹಣ ಜಮಾ ಆಗಿರಬೇಕು, ಆದಾಗ್ಯೂ ಪಾವತಿಗಳ ಪ್ರಕ್ರಿಯೆಯ ಸಮಯಕ್ಕೆ ಅನುಕೂಲ ಕಲ್ಪಿಸಲು 3 ಹೆಚ್ಚುವರಿ ದಿನಗಳನ್ನು ನೀಡಿರಲಾಗತ್ತದೆ. ಬ್ಯಾಂಕ್ ಕ್ರೆಡಿಟ್ ಕಾರ್ಡ್ ಖಾತೆಯನ್ನು ಕ್ರೆಡಿಟ್ ಇನ್ಫರ್ಮೇಷನ್ ಕಂಪನಿಗಳಿಗೆ (ಸಿಐಸಿಗಳು) `ಹಿಂದಿನ ಬಾಕಿ' ಎಂದು ವರದಿ ಮಾಡುತ್ತದೆ ಮತ್ತು 3 ದಿನಗಳನ್ನು ಮೀರಿ `ಹಿಂದಿನ ಬಾಕಿ' ಉಳಿಸಿಕೊಂಡ ಕ್ರೆಡಿಟ್ ಕಾರ್ಡ್ ಖಾತೆಗೆ ತಡವಾಗಿ ಪಾವತಿಸಿದ ದಂಡಶುಲ್ಕಗಳನ್ನು ವಿಧಿಸಲಾಗುತ್ತದೆ. ಆದಾಗ್ಯೂ `ಹಿಂದಿನ ಬಾಕಿ ದಿನಗಳು' ಮತ್ತು ತಡವಾಗಿ ಪಾವತಿಸಿದ ಶುಲ್ಕಗಳನ್ನು ಕ್ರೆಡಿಟ್ ಕಾರ್ಡ್ ಸ್ಟೇಟ್ಮೆಂಟ್ ನಲ್ಲಿ

ನಮೂದಿಸಿದ ಪಾವತಿಯ ಬಾಕಿ ದಿನಾಂಕದಂತೆ ಲೆಕ್ಕ ಹಾಕಲಾಗುತ್ತದೆ. ಅಂತಹ ವರದಿಯ ದಿನಾಂಕದಂದು ಕ್ರೆಡಿಟ್ ಕಾರ್ಡ್ ಖಾತೆಯು ನಿಷ್ಕ್ರಿಯವಾಗಿದ್ದರೆ ಮತ್ತು ಖಾತೆಯನ್ನು ನಂತರ ನಿಯಮಿತಗೊಳಿಸಿದರೆ ಖಾತೆಯ ಸ್ಥಾನಮಾನವನ್ನು ಮುಂದಿನ ಮಾಸಿಕ ವರದಿಗಾರಿಗೆ ಸಂದರ್ಭದಲ್ಲಿ ಸಂಭವನೀಯವಾಗಿ ಮಾತ್ರ ಅಪ್ಡೇಟ್ ಮಾಡಲಾಗುತ್ತದೆ. ಸಿಬಿಲ್ ಪ್ರಕಾರ ಗ್ರಾಹಕರ ಸ್ಥಾನಮಾನದ ಎಲ್ಲ ಬದಲಾವಣೆಗಳನ್ನು ಗರಿಷ್ಠ 30 ದಿನಗಳ ಒಳಗಡೆ ಅಪ್ಡೇಟ್ ಮಾಡಬೇಕು. ಸಿಬಿಲ್ ನೊಂದಿಗೆ ಯಾವುದೇ ವ್ಯತಿರಿಕ್ತ ಇತಿಹಾಸವನ್ನು ತಪ್ಪಿಸಲು ಕ್ರೆಡಿಟ್ ಕಾರ್ಡ್ ದಾರರು ಕಾರ್ಡ್ ಖಾತೆಗೆ ಬಾಕಿ ಇರುವ ಮೊತ್ತವನ್ನು ಬಾಕಿ ದಿನಾಂಕದಂದು ಅಥವಾ ಮುನ್ನ ಸಕಾಲಿಕ ಪಾವತಿ ಮಾಡುವುದನ್ನು ದೃಢೀಕರಿಸಬೇಕು.

- **<u>ಎಸ್.ಎಂ.ಎ. ಮತ್ತು ಎನ್.ಪಿ.ಎ</u>**

(A) ವಿಶೇಷ ನಮೂದು ಖಾತೆಗಳು ('ಎಸ್.ಎಂ.ಎ') :

ಇದಲ್ಲದೆ ಕಾನೂನಿನ ಅಗತ್ಯಗಳಿಗೆ ಪೂರಕವಾಗಿ ಐಡಿಬಿಐ ಖಾತೆಯಲ್ಲಿ ಉಪ-ಸಂಪತ್ತಿನ ವಿಭಾಗ ಸೃಷ್ಟಿಸುವ ಪ್ರಾರಂಭಿಕ ಒತ್ತಡವನ್ನು ಗುರುತಿಸುವ ಅಗತ್ಯವಿದ್ದು ಅದೆಂದರೆ, “ವಿಶೇಷ ನಮೂದು ಖಾತೆಗಳು (‘ಎಸ್.ಎಂ.ಎ’)ಯನ್ನು ಮೂರು ಉಪ-ವಿಭಾಗಗಳನ್ನಾಗಿಸಿದ್ದು ಅವು ಎಸ್.ಎಂ.ಎ0, ಎಸ್.ಎಂ.ಎ1 ಮತ್ತು ಎಸ್.ಎಂ.ಎ2.

(B) ನಿವ್ವಳ ಅನುತ್ಪಾದಕ ಆಸ್ತಿ (ಎನ್.ಪಿ.ಎ) :

ಈ ಹೇಳಿಕೆಯಲ್ಲಿ ಉಲ್ಲೇಖಿಸಿದಂತೆ ಕನಿಷ್ಠ ಬಾಕಿ ಮೊತ್ತವನ್ನು ಸ್ಟೇಟ್ಮೆಂಟ್ ನಲ್ಲಿ ನಮೂದಿಸಿದಂತೆ ಪಿಡಿಡಿಯಿಂದ ತೊಂಬತ್ತು (90) ದಿನಗಳಲ್ಲಿ ಸಂಪೂರ್ಣವಾಗಿ ಪಾವತಿಸದಿದ್ದರೆ ಕ್ರೆಡಿಟ್ ಕಾರ್ಡ್ ಖಾತೆಯನ್ನು ನಿವ್ವಳ ಅನುತ್ಪಾದಕ ಆಸ್ತಿ ('ಎನ್‌ಪಿಎ') ಎಂದು ಪರಿಗಣಿಸಲಾಗುತ್ತದೆ. ಇದಲ್ಲದೆ, ಸೆಟ್ಲ್ ಮೆಂಟ್ ಅಥವಾ ಪುನರ್ರಚನೆ ವ್ಯವಸ್ಥೆಯನ್ನು ಪಡೆದಿರುವ ಯಾವುದೇ ಖಾತೆಯನ್ನು ಎನ್‌ಪಿಎ ಎಂದು ವರ್ಗೀಕರಿಸಲಾಗುತ್ತದೆ. ಬಡ್ಡಿ ಮತ್ತು ಅಸಲಿನ ಸಂಪೂರ್ಣ ಬಾಕಿ ಪಾವತಿಸುವವರೆಗೆ ಖಾತೆಯನ್ನು ಎನ್‌ಪಿಎ ಎಂದು ವರ್ಗೀಕರಿಸಲಾಗುತ್ತದೆ.

ಸೆಟಲ್ಮೆಂಟ್ ಮತ್ತು ಪುನರ್ರಚಿಸಿದ ಖಾತೆಗಳು ಅಪ್‌ಗ್ರೇಡ್‌ಗೆ ಅರ್ಹವಾಗಿರುವುದಿಲ್ಲ.

ಎಸ್.ಎಂ.ಎ ಉಪ-ವಿಭಾಗಗಳು	**ವರ್ಗೀಕರಣಕ್ಕೆ ಆಧಾರ [ಅಸಲು ಅಥವಾ ಬಡ್ಡಿ ಪಾವತಿ ಅಥವಾ ಯಾವುದೇ ಇತರ ಮೊತ್ತವು ಸಂಪೂರ್ಣವಾಗಿ ಅಥವಾ ಭಾಗಶಃ ಬಾಕಿ ಉಳಿದಿದ್ದಲ್ಲಿ]**
ಎಸ್.ಎಂ.ಎ – 0	30 ದಿನಗಳವರೆಗೆ ಪಿಡಿಡಿ
ಎಸ್.ಎಂ.ಎ – 1	30 ದಿನಗಳು ಮೇಲ್ಪಟ್ಟು ಮತ್ತು ಪಿಡಿಡಿಯಿಂದ 60 ದಿನಗಳವರೆಗೆ
ಎಸ್.ಎಂ.ಎ – 2	60 ದಿನಗಳು ಮೇಲ್ಪಟ್ಟು ಮತ್ತು ಪಿಡಿಡಿಯಿಂದ 90 ದಿನಗಳವರೆಗೆ

ವಿವರಣಾತ್ಮಕ ಉದಾಹರಣೆ:

ಕ್ರೆಡಿಟ್ ಕಾರ್ಡ್ ಖಾತೆಯ ಬಾಕಿ ದಿನಾಂಕ ಮಾರ್ಚ್ 31, 2021 ಆಗಿದ್ದರೆ, ಮತ್ತು ಪೂರ್ಣ ಬಾಕಿಯನ್ನು ಬ್ಯಾಂಕ್ ಸ್ವೀಕರಿಸದೇ ಇದ್ದರೆ ಬ್ಯಾಂಕ್ ಈ ದಿನಾಂಕಕ್ಕೆ ದಿನದ ಅಂತಿಮ ಹಂತದ ಪ್ರಕ್ರಿಯೆ ನಡೆಸುತ್ತದೆ, ಅವಧಿ ಮೀರಿದ ಬಾಕಿಯ ದಿನಾಂಕವು ಮಾರ್ಚ್ 31, 2021 ಆಗಿರುತ್ತದೆ. ಇದು ಅವಧಿ ಮೀರಿ ಮುಂದುವರಿದರೆ ಆಗ ಈ ಕಾರ್ಡ್ ಖಾತೆಯನ್ನು ಎಸ್.ಎಂ.ಎ-1 ಎಂದು ಗುರುತಿಸಿ ಏಪ್ರಿಲ್ 30, 2021ರಂದು ದಿನದ ಅಂತಿಮ ಹಂತದ ಪ್ರಕ್ರಿಯೆ ನಡೆಸಲಾಗುತ್ತದೆ, ಅಂದರೆ 30 ದಿನಗಳು ಸತತವಾಗಿ ಬಾಕಿ ಉಳಿದಿರುವುದರ ಪೂರ್ಣಗೊಳ್ಳುವುದಾಗಿದೆ. ಅದೇ ರೀತಿ ಕಾರ್ಡ್ ಖಾತೆಯು ಹೆಚ್ಚುವರಿ ಬಾಕಿ ಹಾಗೆಯೇ ಉಳಿದಿದ್ದರೆ ಅದನ್ನು ಎಸ್.ಎಂ.ಎ-2 ಎಂದು ವರ್ಗೀಕರಿಸಿ ಮೇ 30, 2021ರಂದು ದಿನದ ಅಂತಿಮ ಹಂತದ ಪ್ರಕ್ರಿಯೆ ನಡೆಸಲಾಗುತ್ತದೆ ಮತ್ತು ಅದು ಮತ್ತಷ್ಟು ಹೆಚ್ಚುವರಿ ಬಾಕಿಯಾದರೆ ಅದನ್ನು ಎನ್.ಪಿ.ಎ. ಎಂದು ಪರಿಗಣಿಸಿ ಜೂನ್ 29, 2021ರಂದು ದಿನದ ಅಂತಿಮ ಹಂತದ ಪ್ರಕ್ರಿಯೆ ನಡೆಸಲಾಗುತ್ತದೆ. ಬಾಕಿ ದಿನಾಂಕ: ಮಾರ್ಚ್ 31, 2021.

ಬಾಕಿ ಉಳಿದಿರುವ ದಿನಗಳು	**ವರ್ಗೀಕರಣದ ದಿನಾಂಕ**	**ವರ್ಗೀಕರಣದ ಸ್ಥಾನಮಾನ***
NA	ಮಾರ್ಚ್ 30, 2021	ಸ್ಟ್ಯಾಂಡರ್ಡ್
1	ಮಾರ್ಚ್ 31, 2021	**ಎಸ್.ಎಂ.ಎ**0
31	ಏಪ್ರಿಲ್ 30, 2021	**ಎಸ್.ಎಂ.ಎ** 1
61	ಮೇ 30, 2021	**ಎಸ್.ಎಂ.ಎ** 2
91	ಜೂನ್ 29, 2021	ಎನ್.ಪಿ.ಎ

ಕ್ರೆಡಿಟ್ ಕಾರ್ಡ್ ಸೌಲಭ್ಯಗಳನ್ನು ನಿಯಂತ್ರಿಸುವ ನಿಯಮ ಹಾಗೂ ನಿಬಂಧನೆಗಳು ಪೂರಕ / ಆಡ್ ಆನ್ ಕಾರ್ಡ್ ಹೊಂದಿರುವವರಿಗೂ ಅನ್ವಯಿಸುತ್ತವೆ.

5. <u>ಸ್ವಾಧಿನತೆಯ ಹಕ್ಕು</u>

ಕಾರ್ಡ್ ಖಾತೆಯಲ್ಲಿರುವ ಬಾಕಿ ಮೊತ್ತವನ್ನು ನಿಗದಿತ ಸಮಯದೊಳಗೆ ಮರುಪಾವತಿಸದಿದ್ದರೆ, ಬ್ಯಾಂಕ್ ಕೋರಿದರೆ ಯಾವುದೇ ಸಮಯದಲ್ಲಿ ಮತ್ತು ಸೂಚನೆ ಇಲ್ಲದೆ, ಕಾರ್ಡ್ ಸದಸ್ಯ ಮತ್ತು/ಅಥವಾ ಆಡ್ ಆನ್ ಕಾರ್ಡ್ ಸದಸ್ಯರಿಗೆ ಸೇರಿದ ಮತ್ತು/ಅಥವಾ ಬ್ಯಾಂಕಿನ ಯಾವುದೇ ಖಾತೆ/ಕಸ್ಟಡಿಯಲ್ಲಿರುವ ಹಣವನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಎಲ್ಲ ಹಣವನ್ನೂ ಪಡೆದುಕೊಳ್ಳುವ ಹಕ್ಕು

ಹೊಂದಿರುತ್ತದೆ.

6. **<u>ಕಾರ್ಡ್ ಸದಸ್ಯತ್ವದ ಕೊನೆಗೊಳಿಸುವಿಕೆ/ರದ್ದುಗೊಳಿಸುವಿಕೆ</u>**

(i) ಕಾರ್ಡ್ ಸದಸ್ಯನು ಕಾರ್ಡ್ ಸದಸ್ಯತ್ವವನ್ನು ಯಾವುದೇ ಸಮಯದಲ್ಲಿ ಐಡಿಬಿಐ ಬ್ಯಾಂಕಿನ ಈ ಕೆಳಕಂಡ ವಿಳಾಸಕ್ಕೆ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಿ ಕಾರ್ಡ್ ಅನ್ನು ಅಡ್ಡವಾಗಿ ಕತ್ತರಿಸಿ ಸಲ್ಲಿಸಿ ಕೊನೆಗೊಳಿಸಬಹುದು: "ಮ್ಯಾನೇಜರ್, ಐಡಿಬಿಐ ಬ್ಯಾಂಕ್ ಲಿಮಿಟೆಡ್, ಸಿಪಿಯು- ಕ್ರೆಡಿಟ್ ಕಾರ್ಡ್ಸ್ ಡಿವಿಷನ್, ಐಡಿಬಿಐ ಬಿಲ್ಡಿಂಗ್, 3ನೇ ಮಹಡಿ, ಪ್ಲಾಟ್ ನಂ.39/40/41, ಸೆಕ್ಟರ್-11, ಸಿಬಿಡಿ-ಬೆಲಾಪುರ್, ನವಿ ಮುಂಬೈ, ಪಿನ್-400614". ಆಡ್-ಆನ್ ಕಾರ್ಡ್ ಗಳನ್ನು ಒಳಗೊಂಡು ಎಲ್ಲ ಕಾರ್ಡ್ ಗಳನ್ನೂ ಲಿಖಿತ ಕೋರಿಕೆ ಅಥವಾ customercare@idbi.co.in ಇಲ್ಲಿಗೆ ಇಮೇಲ್ ಕಳುಹಿಸುವ ಮೂಲಕ ರದ್ದುಗೊಳಿಸಬಹುದು. ಇಡೀ ಕಾರ್ಡ್ ಬಾಕಿ ಮತ್ತು ಕ್ರೆಡಿಟ್ ಕಾರ್ಡ್ ಗೆ ಸಂಪರ್ಕ ಹೊಂದಿದ ಸಾಲಗಳು/ಇಎಂಐ ಸೌಲಭ್ಯಗಳನ್ನು (ಪಡೆದಿದ್ದಲ್ಲಿ) ತಕ್ಷಣವೇ ಬಾಕಿಯಾಗುತ್ತವೆ. ರದ್ದುಪಡಿಸುವಿಕೆಯು ಕಾರ್ಡ್ ಖಾತೆಯಲ್ಲಿ ಬಾಕಿ ಇರುವ ಎಲ್ಲ ಖಾತೆಗ ಪಾವತಿಯ ನಂತರ ಮಾತ್ರ ಪರಿಣಾಮಕಾರಿಯಾಗುತ್ತದೆ. ಯಾವುದೇ ವಾರ್ಷಿಕ, ಸೇರ್ಪಡೆಯ ಅಥವಾ ನವೀಕರಣ ಶುಲ್ಕಗಳನ್ನು ಪ್ರಮಾಣವಾರು ಹಿಂದಿರುಗಿಸಲಾಗುವುದಿಲ್ಲ.

(ii) ಕಾರ್ಡ್ ಬಳಕೆಯಲ್ಲಿ ಅಸಾಮಾನ್ಯ ಮತ್ತು ಅಸಹಜ ವಹಿವಾಟು ಮಾದರಿಗಳನ್ನು ಬ್ಯಾಂಕ್ ಗಮನಿಸಿದರೆ, ಕಾರ್ಡ್ ವಹಿವಾಟಿನ ವಿಶ್ವಾಸಾರ್ಹತೆಯನ್ನು ಪರಿಶೀಲಿಸಲು ಬ್ಯಾಂಕ್ ತನ್ನ ದಾಖಲೆಗಳಲ್ಲಿ ಲಭ್ಯವಿರುವ ಗ್ರಾಹಕರ ನೋಂದಾಯಿತ ಫೋನ್ ಸಂಖ್ಯೆಯ ಮೂಲಕ ಗ್ರಾಹಕರೊಂದಿಗೆ ಸಂಪರ್ಕ ಸಾಧಿಸಲು ಪ್ರಯತ್ನಿಸುತ್ತದೆ. ಗ್ರಾಹಕರೊಂದಿಗೆ ಸಂಪರ್ಕ ಸಾಧಿಸುವಲ್ಲಿ ಬ್ಯಾಂಕ್ ವಿಫಲವಾದರೆ, ಕಾರ್ಡ್ ದಾರರ ಹಿತಾಸಕ್ತಿಯಿಂದ ಮತ್ತು / ಅಥವಾ ಭದ್ರತಾ ಕಾರಣಗಳಿಗಾಗಿ ಬ್ಯಾಂಕ್ ಸಮಂಜಸವೆಂದು ಭಾವಿಸಿದರೆ, ಯಾವುದೇ ಸೂಚನೆ ಇಲ್ಲದೆ ಕಾರ್ಡ್ ಬಳಕೆಯನ್ನು ನಿರ್ಬಂಧಿಸಬಹುದು. ಕಾರ್ಡ್ ಸದಸ್ಯರು ಬಾಕಿ ಪಾವತಿಯನ್ನು ಮಾಡದಿದ್ದರೆ ಅಥವಾ ವಿಸ್ತರಿಸಿದ ಸಾಲದ ಮಿತಿಯನ್ನು ಮೀರಿದರೆ, ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಲ್ಲಿನ ಸೌಲಭ್ಯವನ್ನು ಸ್ಥಗಿತಗೊಳಿಸಬಹುದು. ಒಪ್ಪಂದ ಮುಗಿದ ನಂತರ ಅಥವಾ ಕಾರ್ಡ್ ಖಾತೆಯನ್ನು ಅಮಾನತುಗೊಳಿಸಿದರೆ ಕ್ರೆಡಿಟ್ ಕಾರ್ಡ್ ಅನ್ನು ಬಳಸಬಾರದು.

(iii) ಅಂತಹ ಪರಿಸ್ಥಿತಿಯಲ್ಲಿ, ಕಾರ್ಡ್ ಸದಸ್ಯರು (ಕಾನೂನಿನ ಪ್ರಕಾರ ಅಗತ್ಯವಿರುವ ಯಾವುದೇ ಡೀಫಾಲ್ಟ್ ಅಥವಾ ಇತರ ನೋಟಿಸ್ ಗೆ ಒಳಪಟ್ಟು) ಖಾತೆಯಲ್ಲಿರುವ ಒಟ್ಟು ಬಾಕಿ ಮೊತ್ತವನ್ನು ತಕ್ಷಣವೇ ಐಡಿಬಿಐ ಬ್ಯಾಂಕ್‌ಗೆ ಪಾವತಿಸಬೇಕು. ಇದರಲ್ಲಿ ಒಪ್ಪಂದದ ಅಡಿಯಲ್ಲಿ ಐಡಿಬಿಐ ಬ್ಯಾಂಕ್‌ಗೆ ಪಾವತಿಸಬೇಕಾದ ಎಲ್ಲಾ ಮೊತ್ತಗಳನ್ನು ಒಳಗೊಂಡಿರುತ್ತದೆ, ಇದರಲ್ಲಿ ಖಾತೆಯಲ್ಲಿ ಇನ್ನೂ ಶುಲ್ಕ ವಿಧಿಸದ ಎಲ್ಲಾ ವಹಿವಾಟುಗಳು ಮತ್ತು ಇತರ ಮೊತ್ತಗಳನ್ನು ಒಳಗೊಂಡಿರುತ್ತದೆ. ಅಂತಹ ಎಲ್ಲಾ ಬಾಕಿ ಮೊತ್ತವನ್ನು ಬ್ಯಾಂಕ್ ಸ್ವೀಕರಿಸಿದ ನಂತರವೇ ಕಾರ್ಡ್ ಸದಸ್ಯತ್ವವನ್ನು ಕೊನೆಗೊಳಿಸುವುದು/ರದ್ದುಪಡಿಸುವುದು ಪರಿಣಾಮಕಾರಿಯಾಗುತ್ತದೆ.

(iv) ಐಡಿಬಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಯಾವುದೇ ಕಾರಣ ನೀಡದೆ ಕ್ರೆಡಿಟ್ ಕಾರ್ಡ್ (ಗಳು)/ಆಡ್-ಆನ್ ಕಾರ್ಡ್ (ಗಳು) ಮರಳಿ ಪಡೆದುಕೊಳ್ಳಬಹುದು. ಐಡಿಬಿಐ ಬ್ಯಾಂಕ್ ಸಂಪೂರ್ಣ ಬಾಕಿ ಮೊತ್ತವನ್ನು ಹಿಂಪಡೆದರೆ, ಐಡಿಬಿಐ ಬ್ಯಾಂಕ್ ಕಾರ್ಡ್ ಸದಸ್ಯರಿಗೆ ಸಂಪೂರ್ಣ ಬಾಕಿ ಮೊತ್ತವನ್ನು ಪಾವತಿಸಲು ಸೂಕ್ತವಾದ ಸೂಚನೆ ನೀಡುತ್ತದೆ.

(v) ಈ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಬೇರೆಡೆ ಹೇಳಲಾದ ಯಾವುದೇ ವೈರುಧ್ಯವನ್ನು ತಡೆದುಕೊಳ್ಳದೆ ಐಡಿಬಿಐ ಬ್ಯಾಂಕ್ ತನ್ನ ವಿವೇಚನೆಯಿಂದ, ಯಾವುದೇ ಕಾರಣವನ್ನು ನೀಡದೆ ಕ್ರೆಡಿಟ್ ಕಾರ್ಡ್ ಖಾತೆ ಅಥವಾ ಕ್ರೆಡಿಟ್ ಕಾರ್ಡ್/ಆಡ್-ಆನ್ ಕಾರ್ಡ್(ಗಳ) ಮೇಲೆ ನೀಡಲಾದ ಮಿತಿಯನ್ನು ರದ್ದುಗೊಳಿಸಬಹುದು. ಈ ಷರತ್ತಿನ ಪ್ರಕಾರ ಕ್ರೆಡಿಟ್ ಕಾರ್ಡ್ ಖಾತೆ ಅಥವಾ ಕ್ರೆಡಿಟ್ ಕಾರ್ಡ್/ಆಡ್-ಆನ್ ಕಾರ್ಡ್(ಗಳ) ಮೇಲೆ ನೀಡಲಾದ ಮಿತಿಯನ್ನು ಐಡಿಬಿಐ ಬ್ಯಾಂಕ್ ರದ್ದುಗೊಳಿಸಿದರೆ, ಐಡಿಬಿಐ ಬ್ಯಾಂಕ್ ಅಂತಹ ರದ್ದತಿಯ ಬಗ್ಗೆ ಕಾರ್ಡ್ ಸದಸ್ಯರಿಗೆ ತಿಳಿಸುತ್ತದೆ.

(vi) ಕಾರ್ಡ್ ಸದಸ್ಯರ ಮರಣ ಅಥವಾ ಅಧಿಕಾರ ಕಳೆದುಕೊಳ್ಳುವಿಕೆ, ಕಾರ್ಡ್ ಸದಸ್ಯರ ಕಾರ್ಪೊರೇಟ್ ಸಂಸ್ಥೆಯ ದಿವಾಳಿತನ / ವಿಸರ್ಜನೆ /ನಷ್ಟಕ್ಕೆ ಒಳಗಾಗುವುದು/ ಅಥವಾ ಮುಚ್ಚುವಿಕೆಯು ಕಾರ್ಡ್ ಸದಸ್ಯರಿಗೆ ಮತ್ತು ಯಾವುದೇ ಆಡ್-ಆನ್ ಕಾರ್ಡ್ ಸದಸ್ಯರಿಗೆ ನೀಡಲಾದ ಕಾರ್ಡ್ ಅನ್ನು ಸ್ವಯಂಚಾಲಿತವಾಗಿ ರದ್ದುಗೊಳಿಸುತ್ತದೆ. ಸರ್ಕಾರ / ನಿಯಂತ್ರಣ ಸಂಸ್ಥೆಯ ಯಾವುದೇ ಸೂಚನೆಗಳ ಮೇರೆಗೆ ಕಾರ್ಡ್ ಖಾತೆಯನ್ನು ಅಮಾನತುಗೊಳಿಸಬಹುದು. ಮರಣ, ಅಧಿಕಾರ ಕಳೆದುಕೊಳ್ಳುವುದು, ದಿವಾಳಿಯಾಗುವುದು, ನಷ್ಟಕ್ಕೆ ಒಳಗಾಗುವುದು, ಮುಚ್ಚುವುದು ಅಥವಾ ಸರ್ಕಾರ/ನಿಯಂತ್ರಣ ಸಂಸ್ಥೆಗಳ ಸೂಚನೆಯ ಮೇರೆಗೆ ಕಾರ್ಡ್ ಖಾತೆಯಲ್ಲಿ ಇರುವ ಎಲ್ಲ ಬಾಕಿ ಮೊತ್ತವನ್ನು ತಕ್ಷಣವೇ ಬಾಕಿ ಎಂದು ಪರಿಗಣಿಸಲಾಗುತ್ತದೆ ಮತ್ತು ಬ್ಯಾಂಕ್ ಅದನ್ನು ಕಾರ್ಡ್ ಸದಸ್ಯನ ಬಾಧ್ಯತೆಗೆ ಯಾವುದೇ ಹಾನಿಯಾಗದಂತೆ ಸೂಕ್ತ ಕಾನೂನುಗಳ ಅನ್ವಯ ಎಲ್ಲ ಬಾಕಿ ಮೊತ್ತವನ್ನೂ ಹಿಂಪಡೆಯಲು ಬ್ಯಾಂಕ್ ಹಕ್ಕು ಹೊಂದಿರುತ್ತದೆ.

(vii) ಐಡಿಬಿಐ ಬ್ಯಾಂಕ್ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್(ಗಳ) ಬಳಕೆಯು ವಿನಿಮಯ ನಿಯಂತ್ರಣ ನಿಯಮಗಳು, ದೇಶದ ಕಾನೂನು ಅಥವಾ ಕಾಲಕಾಲಕ್ಕೆ ಅನ್ವಯವಾಗುವ ನಿಯಂತ್ರಣ ಪ್ರಾಧಿಕಾರಗಳ ನಿಯಮಗಳಿಗೆ ಕಟ್ಟುನಿಟ್ಟಾಗಿ ಬದ್ಧರಾಗಿರಬೇಕು ಎಂದು ಕಾರ್ಡ್‌ಹೋಲ್ಡರ್ ಅರ್ಥಮಾಡಿಕೊಳ್ಳಬೇಕು. ಕಾರ್ಡ್ ಅನ್ನು ಫಾರೆಕ್ಸ್ ಟ್ರೇಡಿಂಗ್, ಲಾಟರಿ, ಬೆಟ್ಟಿಂಗ್, ಜೂಜಾಟ, ಡೇಟಿಂಗ್ ಒಳಗೊಂಡ ವಹಿವಾಟುಗಳಿಗೆ ಬಳಸಲಾಗುವುದಿಲ್ಲ, ಈ ಬಗ್ಗೆ ಕಾರ್ಡ್‌ದಾರರು ತಮ್ಮನ್ನು ತಾವು ಅಪ್ಡೇಟ್ ಆಗುವುದು ಅವರ ಜವಾಬ್ದಾರಿಯಾಗಿರುತ್ತದೆ ಮತ್ತು ಹಾಗೆ ಮಾಡಲು ವಿಫಲವಾದರೆ, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) 1999 ಅಥವಾ ಅದರ

ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು-ವರ್ಧನೆಯ ಅಡಿಯಲ್ಲಿ ಕ್ರಮಕ್ಕೆ ಕಾರ್ಡ್ ದಾರರು ಹೊಣೆಗಾರರಾಗಿರುತ್ತಾರೆ.

(viii) ಒಂದು ವರ್ಷಕ್ಕಿಂತ ಹೆಚ್ಚು ಕಾಲ ಕ್ರೆಡಿಟ್ ಕಾರ್ಡ್ ಬಳಸದಿದ್ದರೆ, ಕಾರ್ಡ್ ದಾರರಿಗೆ ತಿಳಿಸಿದ ನಂತರ ಕಾರ್ಡ್ ಅನ್ನು ಕೊನೆಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತದೆ. 30 ದಿನಗಳ ಒಳಗೆ ಕಾರ್ಡ್ ದಾರರಿಂದ ಯಾವುದೇ ಉತ್ತರ ಬರದಿದ್ದರೆ, ಕಾರ್ಡ್ ಖಾತೆಯನ್ನು ಮುಚ್ಚಬಹುದು, ಆದರೆ ಕಾರ್ಡ್ ದಾರರು ಎಲ್ಲಾ ಬಾಕಿಗಳನ್ನು ಪಾವತಿಸಿರಬೇಕು.

(ix) ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಬಾಕಿ ಹಣವಿಲ್ಲದಿದ್ದರೆ, ಕ್ರೆಡಿಟ್ ಕಾರ್ಡ್ ಕೊನೆಗೊಳಿಸುವ ಪ್ರಕ್ರಿಯೆಯನ್ನು ಏಳು ಕೆಲಸದ ದಿನಗಳಲ್ಲಿ ಪೂರ್ಣಗೊಳಿಸಲು ಕಾರ್ಡ್ ವಿತರಕರು ವಿಫಲವಾದರೆ, ವಿಳಂಬಕ್ಕಾಗಿ ಪ್ರತಿ ಕ್ಯಾಲೆಂಡರ್ ದಿನಕ್ಕೆ ₹500 ದಂಡವನ್ನು ಗ್ರಾಹಕನಿಗೆ ಕಾರ್ಡ್ ಕೊನೆಗೊಳ್ಳುವವರೆಗೆ ಪಾವತಿಸಬೇಕು, ಆದರೆ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಬಾಕಿ ಇರಬಾರದು.

7. **ಕಾರ್ಡ್ ಕಳೆದು/ಕಳವು/ದುರ್ಬಳಕೆ**

(i) ಕಾರ್ಡ್ ಸದಸ್ಯನು ಪ್ರೈಮರಿ ಅಥವಾ ಯಾವುದೇ ಹೆಚ್ಚುವರಿ ಕಾರ್ಡ್ ತಪ್ಪಿ ಹೋದರೆ, ಕಳೆದು ಹೋದರೆ, ಕಳವಾದರೆ, ಮುರಿದರೆ, ಬಾಕಿ ಸ್ವೀಕರಿಸದೇ ಇದ್ದರೆ ಅಥವಾ ಆತ/ಆಕೆ ಕಾರ್ಡ್ ಸದಸ್ಯರ ಅನುಮತಿ ಇಲ್ಲದೆ ಕ್ರೆಡಿಟ್ ಕಾರ್ಡ್ ಬಳಕೆಯಾಗುತ್ತಿದೆ ಎಂದು ಅನುಮಾನ ಬಂದಲ್ಲಿ 24-ಗಂಟೆ ಕ್ರೆಡಿಟ್ ಕಾರ್ಡ್ ಗ್ರಾಹಕ ಸೇವಾ ಸಂಖ್ಯೆಗೆ ತಕ್ಷಣವೇ ಮಾಹಿತಿ ನೀಡಬೇಕು. ಕಾರ್ಡ್ ದಾರನು ತಕ್ಷಣವೇ ಐವಿಆರ್ ಅಥವಾ ಕ್ರೆಡಿಟ್ ಕಾರ್ಡ್ ನೆಟ್ ಬ್ಯಾಂಕಿಂಗ್ ಅಥವಾ ಗೋ ಮೊಬೈಲ್ ಆಪ್ ಮೂಲಕ ತಕ್ಷಣವೇ ಕಾರ್ಡ್ ನಿರ್ಬಂಧಿಸಬಹುದು. ಒಮ್ಮೆ ಕಾರ್ಡ್ ಕಳೆದಿದೆ ಎಂದು ವರದಿಯಾದರೆ ಅದನ್ನು ಯಾವುದೇ ಸನ್ನಿವೇಶದಲ್ಲಿಯೂ ಬಳಸಲಾಗುವುದಿಲ್ಲ, ಕಾರ್ಡ್ ದಾರರು ಅದನ್ನು ಮರಳಿ ಪಡೆದರೂ ಕಾರ್ಡ್ ದಾರರು ಕಾರ್ಡ್ ಅನ್ನು ಅಡ್ಡವಾಗಿ ಅರ್ಧ ಕತ್ತರಿಸಬೇಕು .

(ii) ಕಾರ್ಡ್ ಕಳೆದಿರುವುದನ್ನು ವರದಿ ಮಾಡುವ ಮೊದಲು ಕಾರ್ಡ್ ಖಾತೆಯಲ್ಲಿ ನಡೆದ ಯಾವುದೇ ವಹಿವಾಟುಗಳಿಗೆ ಬ್ಯಾಂಕ್ ಹೊಣೆಗಾರನಾಗಿರುವುದಿಲ್ಲ ಅಥವಾ ಜವಾಬ್ದಾರನಾಗಿರುವುದಿಲ್ಲ ಮತ್ತು ಕಾರ್ಡ್ ಸದಸ್ಯರೇ ಅದಕ್ಕೆ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ. ಭಾರತದ ಹೊರಗೆ ಇರುವ ವ್ಯಾಪಾರಿಗಳ ಮೇಲೆ ಕಾರ್ಡ್ ವಹಿವಾಟುಗಳನ್ನು ಪ್ರಾರಂಭಿಸಿದಾಗ, ಪಿನ್ / ಹೆಚ್ಚುವರಿ ದೃಢೀಕರಣವಿಲ್ಲದೆ ವ್ಯಾಪಾರಿಗಳು ಅವುಗಳನ್ನು ಪ್ರಕ್ರಿಯೆಗೊಳಿಸಬಹುದು ಏಕೆಂದರೆ ಆ ದೇಶಗಳಲ್ಲಿ ಇದು ಕಡ್ಡಾಯವಾಗಿಲ್ಲದಿರಬಹುದು. ಕಾರ್ಡ್ ಕಳೆದಿರುವ ವರದಿ ಮಾಡುವ ಮೊದಲು ಎಲ್ಲಾ ವಹಿವಾಟುಗಳಿಗೆ ಕಾರ್ಡ್ ಸದಸ್ಯರೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ. ಕಾರ್ಡ್ ಕಳೆದಿರುವ ಬಗ್ಗೆ ಸರಿಯಾದ ಸೂಚನೆಯನ್ನು ಸ್ವೀಕರಿಸಿದ ನಂತರ, ಕಾರ್ಡ್ ಸದಸ್ಯರ ನಂತರದ ಹೊಣೆಗಾರಿಕೆ ಶೂನ್ಯವಾಗಿರುತ್ತದೆ. ಕಾರ್ಡ್ ಕಳೆದುಹೋದ ಅಥವಾ ಕಳ್ಳತನದ ಬಗ್ಗೆ ಐಡಿಬಿಐ ಬ್ಯಾಂಕ್‌ಗೆ ತಿಳಿಸುವುದರ ಜೊತೆಗೆ, ಕಾರ್ಡ್ ಸದಸ್ಯರು ಕಾರ್ಡ್‌ಗಳ ಯಾವುದೇ ಕಳ್ಳತನದ ಬಗ್ಗೆ ಪೊಲೀಸರಿಗೆ ವರದಿ ಮಾಡಬೇಕು, ಎಫ್ಐಆರ್ ದಾಖಲಿಸಬೇಕು ಮತ್ತು ಪೊಲೀಸ್ ದೂರಿನ ಸ್ವೀಕೃತಿ ಪ್ರತಿಯನ್ನು ಒದಗಿಸಬೇಕು.

(iii) ಕಾರ್ಡ್ ಸದಸ್ಯರ ಅಥವಾ ಹೆಚ್ಚುವರಿ ಕಾರ್ಡ್ ಸದಸ್ಯರ ಒಪ್ಪಿಗೆ/ ನಿರ್ಲಕ್ಷ್ಯ/ ಅಜಾಗರೂಕತೆಯಿಂದ ಪಿನ್ ಅಥವಾ ಕಾರ್ಡ್ ಪಡೆದ ಯಾರಾದರೂ ಕಾರ್ಡ್ ಅನ್ನು ದುರುಪಯೋಗಪಡಿಸಿಕೊಂಡರೆ, ಆಗುವ ಎಲ್ಲಾ ನಷ್ಟಗಳಿಗೆ ಕಾರ್ಡ್ ಸದಸ್ಯರೇ ಹೊಣೆಗಾರರಾಗಿರುತ್ತಾರೆ.

(iv) ಕಾರ್ಡ್ ಸದಸ್ಯರು ವಂಚನೆಯಿಂದ ವರ್ತಿಸಿದ್ದರೆ, ಎಲ್ಲಾ ನಷ್ಟಗಳಿಗೆ ಕಾರ್ಡ್ ಸದಸ್ಯರೇ ಹೊಣೆಗಾರರಾಗಿರುತ್ತಾರೆ. ಕಾರ್ಡ್ ಸದಸ್ಯರು ಸೂಕ್ತ ಕಾಳಜಿಯಿಲ್ಲದೆ ವರ್ತಿಸಿದರೆ, ಉಂಟಾದ ಎಲ್ಲಾ ನಷ್ಟಗಳಿಗೆ ಕಾರ್ಡ್ ಸದಸ್ಯರೇ ಹೊಣೆಗಾರರಾಗಬಹುದು.

(v) ಕಾರ್ಡ್ ಸದಸ್ಯರು ಅಥವಾ ಯಾವುದೇ ಹೆಚ್ಚುವರಿ ಕಾರ್ಡ್ ಸದಸ್ಯರನ್ನು ಉಲ್ಲೇಖಿಸದೆಯೇ, ಕಾರ್ಡ್ ಅಥವಾ ಪಿನ್ ದುರ್ಬಳಕೆ, ಕಳ್ಳತನ ಅಥವಾ ದುರುಪಯೋಗದ ಬಗ್ಗೆ ಐಡಿಬಿಐ ಬ್ಯಾಂಕ್ ಸೂಕ್ತವೆಂದು ಪರಿಗಣಿಸುವ ಯಾವುದೇ ಮಾಹಿತಿಯನ್ನು ಪೊಲೀಸರು ಅಥವಾ ಇತರ ಸಂಬಂಧಿತ ಅಧಿಕಾರಿಗಳಿಗೆ ಐಡಿಬಿಐ ಬ್ಯಾಂಕ್ ನೀಡಬಹುದು.

(vi) ಗ್ರಾಹಕ ರಕ್ಷಣೆ- ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟುಗಳ ಗ್ರಾಹಕರ ಸೀಮಿತ ಬಾಧ್ಯತೆ ಕುರಿತಾದ ಭಾರತೀಯ ರಿಜರ್ವ್ ಬ್ಯಾಂಕ್ (ಆರ್.ಬಿ.ಐ)ರ ದಿನಾಂಕ 06 ಜುಲೈ 2017ರ ನಿಯಮದ ಅನ್ವಯ ಅನಧಿಕೃತ ಕ್ರೆಡಿಟ್ ಕಾರ್ಡ್ ವಹಿವಾಟುಗಳಿಗೆ ಸಂಬಂಧಿಸಿದಂತೆ ಗ್ರಾಹಕ ರಕ್ಷಣೆ ಮಾಡಲು ನೀತಿಯನ್ನು ವಿನ್ಯಾಸಗೊಳಿಸಲಾಗಿದೆ. ಅದನ್ನು ಐಡಿಬಿಐ ವೆಬ್ಸೈಟ್ ನಲ್ಲಿ "ಗ್ರಾಹಕರ ದೂರು ಪರಿಹಾರ ನೀತಿ" ಅಡಿಯಲ್ಲಿ ಪ್ರಕಟಿಸಲಾಗಿದೆ. ಈ ನೀತಿಯು ಗ್ರಾಹಕರನ್ನು ನಡೆಸಿಕೊಳ್ಳುವಲ್ಲಿ ಪಾರದರ್ಶಕತೆ ಮತ್ತು ನ್ಯಾಯಯುತವಾಗಿರುವ ತತ್ವಗಳನ್ನು ಆಧರಿಸಿದೆ.

ಪಿನ್ ಅನ್ನು ಸುರಕ್ಷಿತವಾಗಿರಿಸುವ ಬಗ್ಗೆ ಸಂವಹನ

ಕಾರ್ಡ್ ದಾರರಿಗೆ ಕಾರ್ಡ್ ನೊಂದಿಗೆ ಬಳಕೆಗೆ ವಿತರಿಸಲಾದ ಪರ್ಸನಲ್ ಐಡೆಂಟಿಫಿಕೇಷನ್ ನಂಬರ್ (ಪಿನ್) ಅಥವಾ ಕಾರ್ಡ್ ದಾರ ಯಾವುದೇ ಸಂಖ್ಯೆಯನ್ನು ಪಿನ್ ಎಂದು ಆಯ್ಕೆ ಮಾಡಿಕೊಂಡಿದ್ದಲ್ಲಿ ಅದು ಕಾರ್ಡ್ ದಾರರಿಗೆ ಮಾತ್ರ ತಿಳಿದಿರಬೇಕು. ಅದು ಕಾರ್ಡ್ ದಾರನ ವೈಯಕ್ತಿಕ ಬಳಕೆಗಾಗಿದೆ ಮತ್ತು ಅದನ್ನು ವರ್ಗಾಯಿಸಬಾರದು ಮತ್ತು ಅತ್ಯಂತ ಗೋಪ್ಯವಾಗಿರಬೇಕು. ಪಿನ್ ಸಂಖ್ಯೆಯ ಲಿಖಿತ ದಾಖಲೆಯನ್ನು ಯಾವುದೇ ರೂಪದಲ್ಲಿ, ಸ್ಥಳದಲ್ಲಿ ಅಥವಾ ಅದರ ಬಳಕೆಯನ್ನು ಮೂರನೇ ವ್ಯಕ್ತಿ ಬಳಸುವಂತೆ ಇರಿಸಬಾರದು. ಪಿನ್ ಅನ್ನು ಬ್ಯಾಂಕಿನ ಸಿಬ್ಬಂದಿ ಅಥವಾ ವ್ಯಾಪಾರಿ ಸಂಸ್ಥೆಗಳನ್ನು ಒಳಗೊಂಡು ಯವುದೇ ಸಂದರ್ಭದಲ್ಲಿ ಅಥವಾ ಯಾವುದೇ ರೀತಿಯಲ್ಲಿ ಸ್ವಯಂಪ್ರೇರಿತವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ಯಾವುದೇ ಮೂರನೇ ವ್ಯಕ್ತಿ ಬಳಸುವಂತೆ ಬಹಿರಂಗಪಡಿಸಬಾರದು,

ಕಾರ್ಡ್ ದಾರರಿಗೆ ವಿಮಾ ರಕ್ಷಣೆ

ಐಡಿಬಿಐ ಬ್ಯಾಂಕ್ ಕಾರ್ಡ್ ವಿಧ ಆಧರಿಸಿ ಕಳೆದುಹೋದ/ಕಳವಾದ/ ಅಪಘಾತ ವಿಮೆಯ ರಕ್ಷಣೆಯನ್ನು ಉಚಿತವಾಗಿ ನೀಡುತ್ತದೆ. ಈ ಹೇಳಲಾದ ವಿಮೆಯನ್ನು ಮೂರನೇ ಪಕ್ಷದ ವಿಮಾ ಕಂಪನಿಯು ನೀಡುತ್ತದೆ, ಅದು ಈ ನಿಟ್ಟಿನಲ್ಲಿ ಯಾವುದೇ ಕ್ಲೈಮುಗಳಿಗೆ ಜವಾಬ್ದಾರಿ ಕೂಡಾ ಆಗಿರುತ್ತದೆ. ಈ ಪಾಲಿಸಿಯ ರಕ್ಷಣೆಯು ಕ್ರೆಡಿಟ್ ಕಾರ್ಡ್ ಸೆಟಪ್ ಆದ ದಿನಾಂಕದಿಂದ ಪ್ರಾರಂಭವಾಗುತ್ತದೆ. ಅನ್ವಯಿಸುವ ವಿಮೆಯ ರಕ್ಷಣೆ ಕುರಿತು ತಿಳಿಯಲು ದಯವಿಟ್ಟು ಸ್ವಾಗತ ಕೈಪಿಡಿ ಅಥವಾ ಬ್ಯಾಂಕಿನ ವೆಬ್ಸೈಟ್ www.idbibank.in ಭೇಟಿ ನೀಡಿ.

8. ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್

ಈ ಕೆಳಕಂಡಂತೆ ಪಟ್ಟಿ ಮಾಡಲಾಗಿರುವ ನಿಯಮ ಹಾಗೂ ನಿಬಂಧನೆಗಳು ಐಡಿಬಿಐ ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ಗೆ ಅನ್ವಯಿಸುತ್ತವೆ ಮತ್ತು ಅವು ಐಡಿಬಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ನಿರ್ವಹಿಸುವ ಕ್ರೆಡಿಟ್ ಕಾರ್ಡ್ ದಾರರ ಒಪ್ಪಂದದ ಸಾಮಾನ್ಯ ನಿಯಮ ಹಾಗೂ ನಿಬಂಧನೆಗಳಿಗೆ ಹಾಗೂ ಐಡಿಬಿಐ ಬ್ಯಾಂಕಿನ ನಿಶ್ಚಿತ ಠೇವಣಿಯ ನಿಯಮ ಹಾಗೂ ನಿಬಂಧನೆಗಳಿಗೆ ಪೂರಕವಾಗಿರುತ್ತವೆ

(i) ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ಮೇಲಿನ ಸಾಲದ ಮಿತಿಯು ನಿಶ್ಚಿತ ಠೇವಣಿ ಮೊತ್ತದ ಶೇಕಡಾ ಎಂಬತ್ತೈದರವರೆಗೆ (85%) ಅಥವಾ ಐಡಿಬಿಐ ಬ್ಯಾಂಕ್ ಕಾಲಕಾಲಕ್ಕೆ ನಿರ್ಧರಿಸಿದಂತೆ, ಗರಿಷ್ಠ ಸಾಲದ ಮಿತಿ ₹10 ಲಕ್ಷಕ್ಕೆ ಒಳಪಟ್ಟಿರುತ್ತದೆ.

(ii) ಕಾರ್ಡ್‌ದಾರರು ಮತ್ತು/ಅಥವಾ ಎಲ್ಲಾ ಜಂಟಿ ನಿಶ್ಚಿತ ಠೇವಣಿದಾರರು ಐಡಿಬಿಐ ಬ್ಯಾಂಕ್ ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ನೀಡುವ ಕೋರಿಕೆ ಪ್ರಕ್ರಿಯೆಗೊಳಿಸಲು ಐಡಿಬಿಐ ಬ್ಯಾಂಕ್ ನಿರ್ದಿಷ್ಟಪಡಿಸಿದಂತೆ ಆತ/ಅವರು ಸೂಕ್ತ ರೀತಿಯಲ್ಲಿ ಬಿಡುಗಡೆ ಮಾಡಿದ ಠೇವಣಿ ದೃಢೀಕರಣ (ಸಿಒಡಿ) ಯನ್ನು ಸಲ್ಲಿಸಬೇಕು.

(iii) ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ಗೆ ಸ್ವಾಧೀನತೆ ಸೂಚಿಸಿದ ನಿಶ್ಚಿತ ಠೇವಣಿಯನ್ನು ನವೀಕರಿಸಿದ ನಂತರ, ಠೇವಣಿಯ ದೃಢೀಕರಣವನ್ನು ನಿಶ್ಚಿತ ಠೇವಣಿ ಖಾತೆದಾರರಿಗೆ ಕಳುಹಿಸಲಾಗುವುದಿಲ್ಲ.

(iv) ಕಾರ್ಡ್‌ನಲ್ಲಿನ ಸಾಲದ ಮಿತಿಯು ನಿಶ್ಚಿತ ಠೇವಣಿಯ ಅಸಲಿನ ಮೊತ್ತದ ಕಾರ್ಯವಾಗಿರುತ್ತದೆ; ನಿಶ್ಚಿತ ಠೇವಣಿಗಳ ಮೇಲೆ ಪಡೆಯುವ ಬಡ್ಡಿಯು ಗ್ರಾಹಕರಿಗೆ ನಿಗದಿಪಡಿಸಿದ ಸಾಲದ ಮಿತಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

(v) ಕಾರ್ಡ್‌ದಾರರು/ಜಂಟಿ ನಿಶ್ಚಿತ ಠೇವಣಿದಾರರು, ಸಂದರ್ಭಾನುಸಾರ, ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ಅಡಿಯಲ್ಲಿ ಎಲ್ಲಾ ಬಾಕಿಗಳನ್ನು ಪಾವತಿಸದ ಹೊರತು ಮತ್ತು ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ಅನ್ನು ಕೊನೆಗೊಳಿಸದ ಹೊರತು, ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್‌ಗೆ ಸಂಪರ್ಕಿಸಿದ ನಿಶ್ಚಿತ ಠೇವಣಿಯಿಂದ ಭಾಗಶಃ ಹಣವನ್ನು ಹಿಂಪಡೆಯಲು ಅಥವಾ ಮುರಿಯಲು ಸಾಧ್ಯವಾಗುವುದಿಲ್ಲ.

(vi) ನಿಶ್ಚಿತ ಠೇವಣಿ ಅಥವಾ ಐಡಿಬಿಐ ಬ್ಯಾಂಕಿನ ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್‌ನ ಕೊನೆಗೊಳಿಸುವಿಕೆ/ ಹಿಂಪಡೆಯುವಿಕೆ/ರದ್ದತಿಯ ಸಂದರ್ಭದಲ್ಲಿ

- ಕಾರ್ಡ್ ದಾರನು ಬಾಕಿ ಮೊತ್ತವನ್ನು ಅಥವಾ ಕನಿಷ್ಠ ಮೊತ್ತವನ್ನು ಪಾವತಿ ದಿನಾಂಕದ 30 ದಿನಗಳ ಒಳಗೆ ಪಾವತಿಸದಿದ್ದರೆ, ಕ್ರೆಡಿಟ್ ಕಾರ್ಡ್ ಅನ್ನು ಹಾಟ್‌ಲಿಸ್ಟ್ ಮಾಡಲಾಗುತ್ತದೆ ಮತ್ತು ಮುಂದಿನ 21 ದಿನಗಳಲ್ಲಿ ಕಾರ್ಡ್ ದಾರ ಬಾಕಿ ಮೊತ್ತವನ್ನು ಪಾವತಿಸದಿದ್ದರೆ, ಬಾಕಿ ಮೊತ್ತವನ್ನು ತಕ್ಷಣವೇ ಮರುಪಡೆಯಲು ಎಫ್.ಡಿ.(ಗಳನ್ನು) ನಗದೀಕರಿಸಿಕೊಳ್ಳಲಾಗುತ್ತದೆ.
- ಅಥವಾ ಯಾವುದೇ ಶುಲ್ಕಗಳು, ದಂಡಶುಲ್ಕಗಳು ಅಥವಾ ನಿಯಮಗಳ ಪ್ರಕಾರ ಐಡಿಬಿಐ ಬ್ಯಾಂಕ್ ವಿಧಿಸಿದ ಯಾವುದೇ ಇತರ ಮೊತ್ತವನ್ನು ಒಳಗೊಂಡಂತೆ ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ನಲ್ಲಿ ಬಾಕಿ ಇರುವ ಮೊತ್ತವು ಯಾವುದೇ ಸಮಯದಲ್ಲಿ ಸಾಲದ ಮಿತಿ ಮೊತ್ತದ 100% ಕ್ಕಿಂತ ಹೆಚ್ಚು ಅಥವಾ ಸಮನಾಗಿದ್ದರೆ

a) ಬ್ಯಾಂಕಿಗೆ ಕಾರ್ಡ್ ದಾರನ/ ಜಂಟಿ ನಿಶ್ಚಿತ ಠೇವಣಿದಾರನ ಉಳಿತಾಯ ಬ್ಯಾಂಕ್(ಎಸ್.ಬಿ.)/ ಚಾಲ್ತಿ ಖಾತೆ(ಸಿಎ)/ ಇತರೆ ಖಾತೆಗಳ (ಒಬ್ಬರೇ ಅಥವಾ ಜಂಟಿಯಾಗಿ) ಮೂಲಕ ಸೆಕ್ಯೂರ್ಡ್

ಕ್ರೆಡಿಟ್ ಕಾರ್ಡ್‌ ಗೆ ಪಾವತಿಸಬೇಕಾದ ಸಂಪೂರ್ಣ ಬಾಕಿ ಮೊತ್ತವನ್ನು ಪಡೆದುಕೊಳ್ಳುವ ಪೂರ್ಣ ಹಕ್ಕು ಹೊಂದಿರುತ್ತದೆ.

b) ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ಮೇಲಿನ ಒಟ್ಟು ಬಾಕಿ ಮೊತ್ತ ಹಿಂಪಡೆಯಲು ತಕ್ಕಷ್ಟು ಹಣವು ಎಸ್.ಬಿ/ಸಿ.ಎ/ಇತರೆ ಖಾತೆಗಳಲ್ಲಿ ಇಲ್ಲದಿದ್ದರೆ ಆಗ ಐಡಿಬಿಐ ಬ್ಯಾಂಕ್ ಇಡೀ ನಿಶ್ಚಿತ ಠೇವಣಿ ಗಳು)ಯನ್ನು ಗಳಿಸಿದ ಬಡ್ಡಿ ಸೇರಿ ನಗದೀಕರಿಸಿಕೊಳ್ಳುವ ಮತ್ತು ಅದನ್ನು ಅಂತಹ ಖಾತೆಯಿಂದ ಐಡಿಬಿಐ ಬ್ಯಾಂಕ್ ಸೆಕ್ಯೂರ್ಡ್ ಕ್ರೆಡಿಟ್ ಕಾರ್ಡ್ ಅಡಿಯಲ್ಲಿ ಬಾಕಿ ಮೊತ್ತಕ್ಕೆ ಹೊಂದಿಸಿಕೊಳ್ಳುವ/ಸೆಟ್-ಆಫ್ ಮಾಡುವ ಪೂರ್ಣ ಹಕ್ಕು ಹೊಂದಿರುತ್ತದೆ ಮತ್ತು ಕಾರ್ಡ್ ದಾರ/ ಜಂಟಿ ನಿಶ್ಚಿತ ಠೇವಣಿದಾರರು ಐಡಿಬಿಐ ಬ್ಯಾಂಕ್ ವಿರುದ್ಧ ಯಾವುದೇ ಕ್ಲೈಮ್ ಮಾಡುವಂತಿಲ್ಲ. ಅಂತಹ ಉಲ್ಲೇಖಿತ ಹೊಂದಾಣಿಕೆ/ಕಡಿತ/ಸೆಟ್-ಆಫ್ ಅನ್ನು ಕಾರ್ಡ್ ದಾರ/ಜಂಟಿ ನಿಶ್ಚಿತ ಠೇವಣಿದಾರ/ರಿಗೆ ಹಿಂದಿರುಗಿಸಲಾಗುತ್ತದೆ, ಈ ಸಂದರ್ಭದಲ್ಲಿ,

(vii) ನಿಶ್ಚಿತ ಠೇವಣಿ(ಗಳು)ಯ ನಗದೀಕರಿಸಿದ ಸಂದರ್ಭದಲ್ಲಿ ಬ್ಯಾಂಕ್ ಮುಂದೆ ಆಗಬಹುದಾದ ಬಡ್ಡಿಯ ನಷ್ಟಕ್ಕೆ ಬ್ಯಾಂಕ್ ಹೊಣೆಯಾಗುವುದಿಲ್ಲ.

9. ದೂರು ಪರಿಹಾರ ವ್ಯವಸ್ಥೆ

ನಮ್ಮ ಸೇವೆಗಳಿಂದ ಕಾರ್ಡ್‌ದಾರರು ತೃಪ್ತರಾಗದೇ ಇದ್ದಲ್ಲಿ ಅವರು ದೂರು ಪರಿಹಾರ ವ್ಯವಸ್ಥೆ ಬಳಸಿಕೊಂಡು ತಮ್ಮ ದೂರನ್ನು ಸಲ್ಲಿಸಬಹುದು.

ಬ್ಯಾಂಕ್ ದೂರು ನಿರ್ವಹಣೆಗೆ ಮೂರು ಹಂತಗಳ ರಚನೆ ಹೊಂದಿದೆ

(i) 1ನೇ ಹಂತ- ಶಾಖೆ/ಗ್ರಾಹಕ ಅನುಭವ ಕೇಂದ್ರ

(ii) 2ನೇ ಹಂತ- ದೂರು ಪರಿಹಾರ ಅಧಿಕಾರಿ (ಜಿ.ಆರ್.ಒ)

(iii) 3ನೇ ಹಂತ- ಪ್ರಿನ್ಸಿಪಲ್ ನೋಡಲ್ ಆಫೀಸರ್ (ಪಿ.ಎನ್.ಒ.)

* ನೀವು 1ನೇ ಹಂತದಲ್ಲಿ 6 ಕಾರ್ಯ ನಿರ್ವಹಣೆಯ ದಿನಗಳಲ್ಲಿ ಸಂತೃಪ್ತಿಕರ ಪ್ರತಿಕ್ರಿಯೆ ಪಡೆಯದೇ ಇದ್ದಲ್ಲಿ ನಮ್ಮ ಜಿ.ಆರ್.ಒ.ಗೆ grocc@idbi.co.in ಕ್ಕೆ ಇಮೇಲ್ ಮಾಡಿರಿ ಅಥವಾ 022- 66194367 ದೂರವಾಣಿ ಸಂಖ್ಯೆಗೆ ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ತಿಂಗಳ 2ನೇ ಮತ್ತು 4ನೇ ಶನಿವಾರ ಹೊರತುಪಡಿಸಿ ಕರೆ ಮಾಡಿ ಅಥವಾ ಐಡಿಬಿಐ ಬ್ಯಾಂಕ್ ಲಿ. ಕ್ರೆಡಿಟ್ ಕಾರ್ಡ್ಸ್ ಆರ್.ಬಿ.ಜಿ., 19ನೇ ಮಹಡಿ, ಎ ವಿಂಗ್, ಐಡಿಬಿಐ ಟವರ್, ಡಬ್ಲ್ಯೂ.ಟಿ.ಸಿ. ಕಾಂಪ್ಲೆಕ್ಸ್, ಕಫ್ ಪೆರೇಡ್, ಮುಂಬೈ-400 005 ಇಲ್ಲಿಗೆ ಲಿಖಿತ ದೂರು ಸಲ್ಲಿಸಿ.

** ಅಲ್ಲದೆ, ನೀವು 2ನೇ ಹಂತದಲ್ಲಿ ಸಂತೃಪ್ತಿಕರ ಪ್ರತಿಕ್ರಿಯೆಯನ್ನು 4 ಕಾರ್ಯ ನಿರ್ವಹಣೆಯ ದಿನಗಳಲ್ಲಿ ಪಡೆಯದೇ ಇದ್ದಲ್ಲಿ ಪಿ.ಎನ್.ಒ.ಗೆ pno@idbi.co.in ಇಮೇಲ್ ಕಳಿಸಿ ಅಥವಾ 022 66552227 ದೂರವಾಣಿ ಸಂಖ್ಯೆಗೆ ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ತಿಂಗಳ 2ನೇ ಮತ್ತು 4ನೇ ಶನಿವಾರ ಹೊರತುಪಡಿಸಿ ಕರೆ ಮಾಡಿ ಅಥವಾ ಐಡಿಬಿಐ ಬ್ಯಾಂಕ್ ಲಿ. ಕ್ರೆಡಿಟ್ ಕಾರ್ಡ್ಸ್ ಆರ್.ಬಿ.ಜಿ., 19ನೇ ಮಹಡಿ, ಎ ವಿಂಗ್, ಐಡಿಬಿಐ ಟವರ್, ಡಬ್ಲ್ಯೂ.ಟಿ.ಸಿ. ಕಾಂಪ್ಲೆಕ್ಸ್, ಕಫ್ ಪೆರೇಡ್, ಮುಂಬೈ-400 005 ಇಲ್ಲಿಗೆ ಲಿಖಿತ ದೂರು ಸಲ್ಲಿಸಿ.

ದೂರು ಸಲ್ಲಿಸಿದ 30 ದಿನಗಳ ಒಳಗೆ ದೂರು ಪರಿಹಾರವಾಗದ ಸಂದರ್ಭದಲ್ಲಿ ಕಾರ್ಡ್ ಸದಸ್ಯನು/ಳು ಆತ/ಆಕೆಯ ದೂರು/ಗಳ ಪರಿಹಾರಕ್ಕೆ ಇಂಟಿಗ್ರೇಟೆಡ್ ಓಂಬುಡ್ಸ್ ಮನ್ ಸ್ಕೀಂ ಅಡಿಯಲ್ಲಿ ಆರ್.ಬಿ.ಐ. ಓಂಬುಡ್ಸ್ ಮನ್ ಕಛೇರಿಯನ್ನು ಸಂಪರ್ಕಿಸಬಹುದು. ಮತ್ತಷ್ಟು ವಿವರಗಳು www.idbibank.in ದೂರು ಪರಿಹಾರ ವೆಬ್ ಪುಟದಲ್ಲಿ ಕ್ರೆಡಿಟ್ ಕಾರ್ಡ್ ದೂರು ಪರಿಹಾರದಲ್ಲಿ ಲಭ್ಯವಿರುತ್ತವೆ.

10. ಪ್ರಕಟಗೊಳಿಸುವಿಕೆ

ಪ್ರಸ್ತುತ ಉದ್ಯಮದ ರೂಢಿಗಳ ಪ್ರಕಾರ, ಗ್ರಾಹಕರಿಗೆ ಯಾವುದೇ ಸೂಚನೆ ನೀಡದೆ ಬ್ಯಾಂಕ್ ಕಾಲಕಾಲಕ್ಕೆ ಯಾವುದೇ ಕ್ರೆಡಿಟ್ ಬ್ಯೂರೋಗೆ (ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯದ) ಕ್ರೆಡಿಟ್ ಕಾರ್ಡ್(ಗಳಿಗೆ)

ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಬಹುದು ಎಂದು ಕಾರ್ಡ್ ಸದಸ್ಯರು ಒಪ್ಪಿಕೊಳ್ಳುತ್ತಾರೆ. ಕ್ರೆಡಿಟ್ ಇನ್ಫರ್ಮೇಷನ್ ಬ್ಯೂರೋ ಇಂಡಿಯಾ ಲಿಮಿಟೆಡ್ (ಸಿಬಿಲ್) ಹಣಕಾಸು ವ್ಯವಸ್ಥೆಯ ಕಾರ್ಯಕ್ಷಮತೆ ಮತ್ತು ಸ್ಥಿರತೆಯನ್ನು ಸುಧಾರಿಸಲು ಭಾರತ ಸರ್ಕಾರ ಮತ್ತು ಭಾರತೀಯ ರಿಜರ್ವ್ ಬ್ಯಾಂಕ್‌ನ ಒಂದು ಉಪಕ್ರಮವಾಗಿದೆ. ಈ ಉಪಕ್ರಮದಲ್ಲಿ ಭಾಗವಹಿಸುವ ಎಲ್ಲಾ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಗ್ರಾಹಕರ ಡೇಟಾವನ್ನು ಸಿಬಿಲ್/ ಕ್ರೆಡಿಟ್ ಬ್ಯೂರೋಗಳೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ ಮತ್ತು ಈ ಮಾಹಿತಿಯನ್ನು ಕ್ರೆಡಿಟ್ ಮಾಹಿತಿ ಕಂಪನಿಗಳ ನಿಯಂತ್ರಣ ಕಾಯ್ದೆ, 2005 ರ ನಿಯಮಗಳ ಅಡಿಯಲ್ಲಿ ಒದಗಿಸಲಾಗುತ್ತಿದೆ. ಈ ಕಾರಣದಿಂದಾಗಿ, ಕಾರ್ಡ್‌ನ ಮರುಪಾವತಿ ಅವಧಿ ಮೀರಿದ್ದರೆ, ಗ್ರಾಹಕರು ಕ್ರೆಡಿಟ್ ಕಾರ್ಡ್(ಗಳ) ಡಿಫಾಲ್ಟ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಬ್ಯಾಂಕ್ ಸಿಬಿಲ್ ಮತ್ತು ಯಾವುದೇ ಇತರ ಕ್ರೆಡಿಟ್ ಬ್ಯೂರೋಗೆ (ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ) ಸೂಕ್ತ ಸೂಚನೆಯೊಂದಿಗೆ ಬಹಿರಂಗಪಡಿಸಬಹುದು ಎಂದು ಕಾರ್ಡ್ ಸದಸ್ಯರಿಗೆ ತಿಳಿಸಲಾಗಿದೆ. ಬಾಕಿ ಉಳಿದಿರುವ ಕಾರ್ಡ್ ಖಾತೆಗಳಿಗೆ ಪಾವತಿ ಸ್ವೀಕರಿಸಿದ ನಂತರ ಡೇಟಾದ ಯಾವುದೇ ನವೀಕರಣ/ಅಪ್ಡೇಷನ್ ಬ್ಯಾಂಕ್ ನಿಂದ ಪಾವತಿ ಸ್ವೀಕರಿಸಿದ 60 ದಿನಗಳ ಒಳಗೆ ಸಿಬಿಲ್/ ಇತರ ಕ್ರೆಡಿಟ್ ಬ್ಯೂರೋಗಳಲ್ಲಿ ಪ್ರತಿಫಲಿಸುತ್ತದೆ.

ಕಾರ್ಡ್ ಸದಸ್ಯರಿಗೆ ತಿಳಿಸುವುದೇನೆಂದರೆ ಕುಂದುಕೊರತೆ ಸಂಬಂಧಿತ ಸಂಭಾಷಣೆಗಳು ಅಥವಾ ಪಾವತಿ-ವಸೂಲಾತಿ ಸಂಬಂಧಿತ ಸಂಭಾಷಣೆಗಳ ಸಂದರ್ಭಗಳಲ್ಲಿ, ಅದು ಬ್ಯಾಂಕ್ ಸೂಕ್ತವೆಂದು ಪರಿಗಣಿಸಿದರೆ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ಕಾರ್ಡ್ ಸದಸ್ಯ ಮತ್ತು ಬ್ಯಾಂಕಿನ ಪ್ರತಿನಿಧಿಯ ನಡುವಿನ ನಿರ್ದಿಷ್ಟ ಸಂಭಾಷಣೆಗಳನ್ನು ದಾಖಲಿಸುತ್ತದೆ. ಕಾರ್ಡ್ ಸದಸ್ಯರು ಹೊಂದಿರುವ ಕ್ರೆಡಿಟ್ ಕಾರ್ಡ್, ಕಾರ್ಡ್ ಸದಸ್ಯರ ಅರ್ಹತೆ ಮತ್ತು ಬ್ಯಾಂಕಿನ ವಿವೇಚನೆಯ ಆಧಾರದ ಮೇಲೆ ಅಪ್‌ಗ್ರೇಡ್/ಡೌನ್‌ಗ್ರೇಡ್‌ಗೆ ಒಳಪಡುತ್ತದೆ. ಇದು ಕಾರ್ಡ್ ಸದಸ್ಯರಿಗೆ ನಿಯೋಜಿಸಲಾದ ಸಾಲದ ಮಿತಿಯ ಮಾರ್ಪಾಡಿಗೆ ಮಾತ್ರ ಸೀಮಿತವಾಗಿರದೆ ವಿಸ್ತರಿಸಲಾಗಿದೆ.

ಐಡಿಬಿಐ ಬ್ಯಾಂಕ್ ಎಲ್.ಐ.ಸಿ.ಎಸ್.ಎಲ್. ಜೊತೆಯಲ್ಲಿ ಕೋ-ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಗಳನ್ನು ಒದಗಿಸುತ್ತದೆ. ಬ್ಯಾಂಕ್ ಈ ಹೊಂದಾಣಿಕೆಯ ಅಡಿಯಲ್ಲಿ ಆದಾಯ/ಶುಲ್ಕವನ್ನು ಪಾಲುದಾರ ಕಾರ್ಪೊರೇಟ್ ಸಂಸ್ಥೆಯೊಂದಿಗೆ ಹಂಚಿಕೊಳ್ಳಬಹುದು.

ಪ್ರಮುಖ ನಿಯಂತ್ರಣ ಮಾಹಿತಿ

(i) ಈ ಕಾರ್ಡ್ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಬಳಸಲು ಮಾನ್ಯತೆ ಪಡೆದಿದೆ. ಆದಾಗ್ಯೂ, ನೇಪಾಳ ಮತ್ತು ಭೂತಾನ್‌ನಲ್ಲಿ ವಿದೇಶಿ ಕರೆನ್ಸಿ ವಹಿವಾಟುಗಳನ್ನು ಮಾಡಲು ಇದು ಮಾನ್ಯವಾಗಿಲ್ಲ.

(ii) ಭಾರತದ ಹೊರಗೆ ವಹಿವಾಟು ನಡೆಸಲು ಕಾರ್ಡ್‌ನ ಬಳಕೆಯನ್ನು ಆರ್.ಬಿ.ಐ.ನ ವಿನಿಮಯ ನಿಯಂತ್ರಣ ನಿಯಮಗಳು ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ, 1999 ಸೇರಿದಂತೆ ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ ಬಳಸಬೇಕು. ಇಂಟರ್ನೆಟ್ ಟ್ರೇಡಿಂಗ್ ಪೋರ್ಟಲ್ ಗಳ ಮೂಲಕ ವಿದೇಶಿ ವಿನಿಮಯ ವ್ಯಾಪಾರಕ್ಕೆ ಅನುಮತಿ ಇಲ್ಲ. ಯಾವುದೇ ಉಲ್ಲಂಘನೆಗಳು ಅಥವಾ ಪಾಲಿಸಲು ವಿಫಲವಾದರೆ, ನೀವು ದಂಡದ ಕ್ರಮಕ್ಕೆ ಗುರಿಯಾಗಬಹುದು. ನಿಮ್ಮ ವಿದೇಶಿ ವಿನಿಮಯ ಅರ್ಹತೆಯ ಕುರಿತು ನೀವು ನಿಮ್ಮ ಅಧಿಕೃತ ಡೀಲರ್ (ಎಡಿ) ಅವರನ್ನು ಸಂಪರ್ಕಿಸಬೇಕು.

(iii) ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಸಾಲದ ಬಾಕಿ ಇದ್ದರೆ, ಐಡಿಬಿಐ ಬ್ಯಾಂಕ್ ಈ ಸಾಲದ ಬಾಕಿಯನ್ನು ನಿಮಗೆ ಹಿಂದಿರುಗಿಸುವ ಹಕ್ಕನ್ನು ಹೊಂದಿದೆ.

(iv) ವಿದೇಶಿ ಸಂಸ್ಥೆಗಳಲ್ಲಿ ಹೂಡಿಕೆ ಅಥವಾ ವಿದೇಶಗಳಲ್ಲಿ ಸಂಸ್ಥೆಗಳನ್ನು ಸ್ಥಾಪಿಸುವಂತಹ ಬಂಡವಾಳ ಖಾತೆ ವಹಿವಾಟುಗಳಿಗೆ ಹಣ ರವಾನೆ/ಪಾವತಿಗಳನ್ನು ಮಾಡಲು ದಯವಿಟ್ಟು ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಬೇಡಿ ಏಕೆಂದರೆ ಇದು ಆರ್.ಬಿ.ಐ.ನ ಮಾಸ್ಟರ್ ಡೈರೆಕ್ಷನ್ –ಡೈರೆಕ್ಟ್ ಇನ್ವೆಸ್ಟ್ ಮೆಂಟ್ಸ್ ಬೈ ರೆಸಿಡೆಂಟ್ಸ್ ಅಡಿಯಲ್ಲಿ ವಿದೇಶದಲ್ಲಿ ಜಂಟಿ ಉದ್ಯಮ/ ಸಂಪೂರ್ಣ ಸ್ವಾಮ್ಯದ

ಅಂಗಸಂಸ್ಥೆಗೆ ಅನುಮತಿಸಲಾದ ಹಣಕಾಸು ವಿಧಾನವಲ್ಲ.

(v) ಅಕ್ಟೋಬರ್ 01, 2022 ರಂದು ಅಥವಾ ನಂತರ ನೀಡಲಾದ ಹೊಸ ಕಾರ್ಡ್‌ಗಳಿಗಾಗಿ, ಕಾರ್ಡ್‌ದಾರರು 30 ದಿನಗಳಲ್ಲಿ ಕಾರ್ಡ್ ಅನ್ನು ಸಕ್ರಿಯಗೊಳಿಸಬೇಕು. ಕಾರ್ಡ್‌ದಾರರು ಪಿನ್ ಅನ್ನು ಸೆಟಪ್ ಮಾಡಿದರೆ ಅಥವಾ ಆನ್‌ಲೈನ್ ಮತ್ತು ಅಂತಾರಾಷ್ಟ್ರೀಯ ವಹಿವಾಟುಗಳಿಗೆ ಸಕ್ರಿಯಗೊಳಿಸಿದರೆ ಮತ್ತು/ಅಥವಾ ಮಿತಿಗಳನ್ನು ಹೊಂದಿಸಿದರೆ ಅಥವಾ ಕಾರ್ಡ್ ಅನ್ನು ಖರೀದಿಗಳಿಗೆ ಬಳಸಿದರೆ ಕಾರ್ಡ್ ಅನ್ನು ಸಕ್ರಿಯಗೊಳಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.

11. ಡಿಲೈಟ್ ಪಾಯಿಂಟ್ ಗಳು

ಕಾರ್ಡ್ ವಿಧ ಮತ್ತು ಉತ್ಪನ್ನ ವಿಶೇಷತೆಗಳಲ್ಲಿ ವ್ಯಾಖ್ಯಾನಿಸಲಾದ ಅನ್ವಯವಾಗುವ ಮೆಟ್ರಿಕ್ಸ್ ಆಧಾರದಲ್ಲಿ, ಎಲ್ಲಾ ಅರ್ಹ ವಹಿವಾಟುಗಳ ಮೇಲೆ ಡಿಲೈಟ್ ಪಾಯಿಂಟ್ ಗಳನ್ನು ಗಳಿಸಲಾಗುತ್ತದೆ. ವಹಿವಾಟು ಪೂರ್ಣಗೊಂಡ ನಂತರವೇ ಡಿಲೈಟ್ ಪಾಯಿಂಟ್‌ಗಳನ್ನು ಗ್ರಾಹಕರಿಗೆ ಜಮಾ ಮಾಡಲಾಗುತ್ತದೆ. ವಹಿವಾಟು ಪೂರ್ಣಗೊಳ್ಳದೇ ಇದ್ದಲ್ಲಿ ಮತ್ತು ಹಣವು ಬಿಲ್ಲಿಂಗ್ ಆಗದೇ ಬಿಡುಗಡೆಯಾಗಿದ್ದಲ್ಲಿ ಯಾವುದೇ ಪಾಯಿಂಟ್ ಗಳನ್ನು ಜಮಾ ಮಾಡುವುದಿಲ್ಲ. ಗ್ರಾಹಕರಿಗೆ ಈ ಕೆಳಗಡೆ ನೀಡಲಾದ ಕೋಷ್ಟಕದಂತೆ ವಹಿವಾಟಿನ ವಿಧಗಳಿಗೆ ಡಿಲೈಟ್ ಪಾಯಿಂಟ್ ಗಳನ್ನು ನೀಡಲಾಗುವುದಿಲ್ಲ.

ಪಾಯಿಂಟ್ಸ್ ಅವಧಿ ಮುಕ್ತಾಯ: ಗ್ರಾಹಕರಿಗೆ ಜಮಾ ಆದ ಪಾಯಿಂಟ್ ಗಳು 3 ವರ್ಷಗಳ ಮುಕ್ತಾಯದ ಅವಧಿ ಹೊಂದಿರುತ್ತವೆ. ಆದಾಗ್ಯೂ, ಅಭಿಯಾನ ಅಥವಾ ಪ್ರೊಮೋಷನಲ್ ಆಫರ್ ಮೂಲಕ ಜಮಾ ಮಾಡುವ ಪಾಯಿಂಟ್ ಗಳ ಮುಕ್ತಾಯದ ಅವಧಿ 1 ವರ್ಷ ಮಾತ್ರ.

ಡಿಲೈಟ್ ಪಾಯಿಂಟ್ಸ್ ಸಂಚಯ ಮೀರಿದ ವಹಿವಾಟುಗಳು: ಡಿಲೈಟ್ ಪಾಯಿಂಟ್ಸ್ ಅನ್ನು ಐಡಿಬಿಐ ಕ್ರೆಡಿಟ್ ಕಾರ್ಡ್ ಗಳನ್ನು ಬಳಸಿ ಮಾಡುವ ಎಲ್ಲ ವ್ಯಯಗಳಿಗೆ ನೀಡಲಾಗುತ್ತದೆ ಆದರೆ ಈ ಕೆಳಕಂಡವುಗಳಿಗೆ ಹೊರತಾಗಿರುತ್ತವೆ:

ಮರ್ಚೆಂಟ್ ಕ್ಯಾಟಗರಿ ಕೋಡ್ (ಎಂಸಿಸಿ)	ವಿವರಣೆ
6010	ಹಣಕಾಸು ಸಂಸ್ಥೆಗಳು- ಹಸ್ತಚಾಲಿತ ನಗದು ವಿತರಣೆಗಳು
6011	ಹಣಕಾಸು ಸಂಸ್ಥೆಗಳು- ಸ್ವಯಚಾಲಿತ ನಗದು ವಿತರಣೆಗಳು
6211	ಸೆಕ್ಯುರಿಟೀಸ್/ಬ್ರೋಕರ್ಸ್/ಡೀಲರ್ಸ್
6300	ವಿಮಾ ಮಾರಾಟ, ಅಂಡರ್ ರೈಟಿಂಗ್ ಮತ್ತು ಕಂತುಗಳು
6381	ವಿಮಾ ಕಂತುಗಳು
9211	ಜೀವನಾಂಶ ಮತ್ತು ಮಗುವಿನ ಬೆಂಬಲ ಒಳಗೊಂಡು ನ್ಯಾಯಾಲಯದ ವೆಚ್ಚಗಳು
9222	ದಂಡಶುಲ್ಕಗಳು
9311	ತೆರಿಗೆ ಪಾವತಿಗಳು
9399	ಸರ್ಕಾರಿ ಸೇವೆಗಳು- ಬೇರೆಲ್ಲೂ ವರ್ಗೀಕರಿಸಲಾಗದಿರುವುದು
9405	ಸರ್ಕಾರದೊಳಗಿನ ಖರೀದಿಗಳು- ಸರ್ಕಾರ ಮಾತ್ರ
4112	ಪ್ಯಾಸೆಂಜರ್ ರೈಲುಗಳು
5960	ಡೈರೆಕ್ಟ್-ಮಾರ್ಕೆಟಿಂಗ್- ವಿಮಾ ಸೇವೆಗಳು
5541	ಸರ್ವೀಸ್ ಸ್ಟೇಷನ್ ಗಳು (ಸಹಾಯಕ ಸೇವೆಗಳು ಒಳಗೊಂಡು ಹಾಗೂ ಇಲ್ಲದೆ)
5542	ಆಟೊಮೇಟೆಡ್ ಫ್ಯೂಯೆಲ್ ಡಿಸ್ಪೆನ್ಸರ್ಸ್
5172	ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು
5983	ಫ್ಯೂಯೆಲ್ ಡೀಲರ್ ಗಳು0 ಕೋಲ್ ಫ್ಯೂಯೆಲ್ ಆಯಿಲ್, ಲಿಕ್ವಿಫೈಡ್ ಪೆಟ್ರೋಲಿಯಂ ಉತ್ಪನ್ನಗಳು.

ಗ್ರಾಹಕರಿಗೆ ಡಿಲೈಟ್ ಪಾಯಿಂಟ್‌ಗಳನ್ನು ಒದಗಿಸಿ, ನಂತರದ ದಿನಾಂಕದಲ್ಲಿ ವಹಿವಾಟನ್ನು ಹಿಂತಿರುಗಿಸಿದರೆ/ರಿಫಂಡ್ ಮಾಡಿದರೆ ಅದಕ್ಕೆ ಅನುಗುಣವಾದ ಸಂಖ್ಯೆಯ ಪಾಯಿಂಟ್‌ಗಳನ್ನು ಗ್ರಾಹಕರ ಪಾಯಿಂಟ್‌ಗಳ ಬಾಕಿಯಿಂದ ಕಡಿತಗೊಳಿಸಲಾಗುತ್ತದೆ. ಗ್ರಾಹಕರು ಸಾಕಷ್ಟು ಸಂಖ್ಯೆಯ ಪಾಯಿಂಟ್ ಗಳನ್ನು ಹೊಂದಿಲ್ಲದಿದ್ದರೆ ಅಥವಾ ಪಾಯಿಂಟ್ ಗಳ ಬಾಕಿ ಕಡಿತ ಮಾಡಬೇಕಾದ ಅಂಕಗಳ ಸಂಖ್ಯೆಗಿಂತ ಕಡಿಮೆಯಿದ್ದರೆ, ಒಟ್ಟು ಅಂಕಗಳ ಬಾಕಿಯನ್ನು ಋಣಾತ್ಮಕ ಅಂಕಿಗೆ ಕಡಿತ ಮಾಡಲಾಗುತ್ತದೆ.

ಹಕ್ಕು ನಿರಾಕರಣೆ:

* ಐಡಿಬಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆ ಆಧರಿಸಿ ಅಗತ್ಯವಿದ್ದಲ್ಲಿ ಅಥವಾ ಸೂಕ್ತ ಎನಿಸಿದಲ್ಲಿ ತನ್ನ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಹೊರಗಿನ ಸೇವಾ ಪೂರೈಕೆದಾರ/ರು ಅಥವಾ ಏಜೆಂಟ್/ರ ಸೇವೆಗಳನ್ನು ನಿಯಮಗಳಂತೆ ಬಳಸಿಕೊಳ್ಳಬಹುದು. ಅಂತಹ ಸೇವೆಗಳ ನೆರವೇರಿಕೆಯು ಸೇವಾ ಪೂರೈಕೆದಾರ/ರ ಸ್ವಂತ ಜವಾಬ್ದಾರಿಯಾಗಿರುತ್ತದೆ.

19

ಕ್ರೆಡಿಟ್ ಕಾರ್ಡ್ ಶುಲ್ಕಗಳು ಮತ್ತು ದಂಡಶುಲ್ಕಗಳ ವಿವರ

(ಏಪ್ರಿಲ್ 13, 2023ರಿಂದ ಅನ್ವಯಿಸುವಂತೆ)

1) ಸೇರ್ಪಡೆ, ವಾರ್ಷಿಕ ಮತ್ತು ಆಡ್-ಆನ್ ಕಾರ್ಡ್ ಶುಲ್ಕ/ಇತರೆ

ಐಡಿಬಿಐ ಬ್ಯಾಂಕ್ ಕಾರ್ಡ್ ಮಾದರಿ	ಸೇರ್ಪಡಿಕೆ ಶುಲ್ಕ- ಪ್ರೈಮರಿ/ಆಡ್ ಆನ್ ಕಾರ್ಡ್	ವಾರ್ಷಿಕ ಶುಲ್ಕ- ಪ್ರೈಮರಿ ಕಾರ್ಡ್ (2ನೇ ವರ್ಷದ ನಂತರ)	ನವೀಕರಣ ಶುಲ್ಕ- ಪ್ರೈಮರಿ/ ಆಡ್ ಆನ್ ಕಾರ್ಡ್	ವಾರ್ಷಿಕ ಶುಲ್ಕ- ಆಡ್ ಆನ್ ಕಾರ್ಡ್
ಆಸ್ಪೈರ್	ಶೂನ್ಯ	ಶೂನ್ಯ	ಶೂನ್ಯ	ಶೂನ್ಯ
ರಾಯಲ್	ಶೂನ್ಯ	ಶೂನ್ಯ	ಶೂನ್ಯ	ಶೂನ್ಯ
ಯೂಫೋರಿಯಾ	ಶೂನ್ಯ	₹1499/- (ಹಿಂದಿನ ವರ್ಷದಲ್ಲಿ ಕನಿಷ್ಠ ₹1,50,000/- ವ್ಯಯಿಸಿದ್ದಕ್ಕೆ ಕಡಿತ ಮಾಡಲಾಗುತ್ತದೆ)	ಶೂನ್ಯ	ಶೂನ್ಯ
ವಿನ್ನಿಂಗ್ಸ್	ಶೂನ್ಯ	₹899/- (ಹಿಂದಿನ ವರ್ಷ ಕನಿಷ್ಠ ₹90,000/- ವ್ಯಯಿಸಿದ್ದಕ್ಕೆ ಕಡಿತ ಮಾಡಲಾಗುತ್ತದೆ)	ಶೂನ್ಯ	ಶೂನ್ಯ
ಇಂಪೀರಿಯಂ	ಶೂನ್ಯ	₹499/- (ಹಿಂದಿನ ವರ್ಷ ಕನಿಷ್ಠ ₹75,000/- ವ್ಯಯಿಸಿದ್ದಕ್ಕೆ ಕಡಿತ ಮಾಡಲಾಗುತ್ತದೆ)	ಶೂನ್ಯ	ಶೂನ್ಯ
ಎಲ್.ಐ.ಸಿ.- ಎಕ್ಲಾಟ್	ಶೂನ್ಯ	ಶೂನ್ಯ	ಶೂನ್ಯ	ಶೂನ್ಯ
ಎಲ್.ಐ.ಸಿ.- ಲುಮಿನ್	ಶೂನ್ಯ	ಶೂನ್ಯ	ಶೂನ್ಯ	ಶೂನ್ಯ

2) ಹಣಕಾಸು/ಸೇವಾ ಶುಲ್ಕ

ಐಡಿಬಿಐ ಬ್ಯಾಂಕ್ ಕಾರ್ಡ್ ಮಾದರಿ	ರಿವಾಲ್ವಿಂಗ್ ಕ್ರೆಡಿಟ್ ಸೌಲಭ್ಯಕ್ಕೆ ಬಡ್ಡಿ		ನಗದು ಮುಂಗಡಗಳ ಮೇಲೆ ಬಡ್ಡಿ	
	ಮಾಸಿಕ ದರ (ಪ್ರತಿ ತಿಂಗಳಿಗೆ)	ವಾರ್ಷಿಕಗೊಳಿಸಿದ ಶೇಕಡಾವಾರು ದರ (ಪ್ರತಿ ವರ್ಷಕ್ಕೆ)	ಮಾಸಿಕ ದರ (ಪ್ರತಿ ತಿಂಗಳಿಗೆ)	ಮಾಸಿಕ ದರ (ಪ್ರತಿ ತಿಂಗಳಿಗೆ)
ಆಸ್ಪೈರ್	2.90%	34.80%	2.90%	34.80%

ರಾಯಲ್	2.50%	30.00%	2.50%	30.00%
ಯೂಫ್ಲೋರಿಯಾ	2.90%	34.80%	2.90%	34.80%
ವಿನ್ನಿಂಗ್ಸ್	3.40%	40.80%	3.40%	40.80%
ಇಂಪೀರಿಯಂ	2.90%	34.80%	2.90%	34.80%
ಎಲ್.ಐ.ಸಿ.-ಎಕ್ಲಾಟ್	3.40%	40.80%	3.40%	40.80%
ಎಲ್.ಐ.ಸಿ.-ಲುಮಿನ್	3.40%	40.80%	3.40%	40.80%

20

3) ಇತರೆ ಶುಲ್ಕಗಳು ಮತ್ತು ದಂಡಶುಲ್ಕಗಳು

<table>
<tr><th>ಶುಲ್ಕಗಳು ಮತ್ತು ದಂಡಶುಲ್ಕಗಳ ವಿಧ</th><th>ಮೊತ್ತ</th></tr>
<tr><td>ನಗದು ಮುಂಗಡ ವಹಿವಾಟು ಶುಲ್ಕ *</td><td>ವಹಿವಾಟು ಶುಲ್ಕದ 2.5% ಅಥವಾ ₹500/- ಯಾವುದು ಹೆಚ್ಚೋ ಅದು</td></tr>
<tr><td>ತಡವಾಗಿ ಪಾವತಿಸಿದ ಶುಲ್ಕಗಳು (ಎಲ್.ಪಿ.ಸಿ.) (ಪ್ರತಿ ಸ್ಟೇಟ್ಮೆಂಟ್ ಗೆ, ಸ್ಟೇಟ್ಮೆಂಟ್ ಬಾಕಿಯಂತೆ) **</td><td>
<table>
<tr><th>□□□□□□□□□□□□ □□□□□□□</th><th>□□□□□□□ □□□□□□□□□ □□□□□□□□□□</th></tr>
<tr><td>< = ₹500</td><td>□□□□□□</td></tr>
<tr><td>> ₹500 to < = ₹5000</td><td>₹400</td></tr>
<tr><td>> ₹5000 to < = ₹10000</td><td>₹500</td></tr>
<tr><td>> ₹10000 to < = ₹20000</td><td>₹750</td></tr>
<tr><td>> ₹20000</td><td>₹950</td></tr>
</table>
</td></tr>
<tr><td>ಓವರ್ ಲಿಮಿಟ್ ಶುಲ್ಕ ***</td><td>ಓವರ್ ಲಿಮಿಟ್ ಮೊತ್ತದ 2.5% ಕನಿಷ್ಠ ₹500/- ಆಗಿರುತ್ತದೆ</td></tr>
<tr><td>ಚೆಕ್/ಆಟೊ ಡೆಬಿಟ್ ರಿಟರ್ನ್ ಶುಲ್ಕಗಳು</td><td>₹500/-</td></tr>
<tr><td>ಕ್ರೆಡಿಟ್ ಕಾರ್ಡ್ ಪಾವತಿಗೆ ಐಡಿಬಿಐ ಬ್ಯಾಂಕ್ ಗಳಲ್ಲಿ ನಗದು ನಿರ್ವಹಣೆ ಶುಲ್ಕ</td><td>₹200/-</td></tr>
<tr><td>ನಕಲಿ ಸ್ಟೇಟ್ಮೆಂಟ್ ಕೋರಿಕೆ</td><td>₹100/- ಪ್ರತಿ ಸ್ಟೇಟ್ಮೆಂಟ್ ಗೆ (03 ತಿಂಗಳಿಗಿಂತ ಹಳೆಯದು)</td></tr>
<tr><td>ಕಾರ್ಡ್ ಬದಲಾವಣೆ ಶುಲ್ಕ</td><td>₹200/-</td></tr>
<tr><td>ಇಎಂಐ ಬಡ್ಡಿದರ</td><td>ವಾರ್ಷಿಕ13%
(ಅರ್ಹ ಅವಧಿಗಳು – 3, 6, 9, 12, 18, 24, 30 ಮತ್ತು 36 ತಿಂಗಳು)</td></tr>
<tr><td>ಇಎಂಐ ಪರಿವರ್ತನೆ ಶುಲ್ಕ</td><td>ಶೂನ್ಯ</td></tr>
<tr><td>ಇಎಂಐ ಪೂರ್ವಮುಕ್ತಾಯ ಶುಲ್ಕಗಳು</td><td>ಶೂನ್ಯ</td></tr>
<tr><td>ವಿದೇಶಿ ಕರೆನ್ಸಿ ಬದಲಾವಣೆ ಶುಲ್ಕಗಳು</td><td>ಬ್ಯಾಂಕ್ ಶುಲ್ಕಗಳು ಕ್ರಾಸ್ ಕರೆನ್ಸಿ ಮಾರ್ಕ್ ಅಪ್ 3.5%</td></tr>
<tr><td>ಇಂಧನ ಸರ್ಚಾರ್ಜ್ ಕಡಿತ</td><td>ಆಸ್ಪೈರ್- ಹೌದು (ಕನಿಷ್ಠ 400/ ಮೌಲ್ಯದ ವಹಿವಾಟಿಗೆ
ಗರಿಷ್ಠ ₹4000/- ವರೆಗೆ, ಗರಿಷ್ಠ ಕಡಿತ ಪ್ರತಿ ತಿಂಗಳಿಗೆ ₹300/-)
ರಾಯಲ್- ಹೌದು (ಕನಿಷ್ಠ 400/ ಮೌಲ್ಯದ ವಹಿವಾಟಿಗೆ
ಗರಿಷ್ಠ ₹5000/- ವರೆಗೆ, ಗರಿಷ್ಠ ಕಡಿತ ಪ್ರತಿ ತಿಂಗಳಿಗೆ ₹500/-)
ಯೂಫೋರಿಯಾ- ಹೌದು (ಕನಿಷ್ಠ 400/ ಮೌಲ್ಯದ ವಹಿವಾಟಿಗೆ
ಗರಿಷ್ಠ ₹5000/- ವರೆಗೆ, ಗರಿಷ್ಠ ಕಡಿತ ಪ್ರತಿ ತಿಂಗಳಿಗೆ ₹500/-)
ವಿನ್ನಿಂಗ್ಸ್- ಹೌದು (ಕನಿಷ್ಠ 400/ ಮೌಲ್ಯದ ವಹಿವಾಟಿಗೆ
ಗರಿಷ್ಠ ₹4000/- ವರೆಗೆ, ಗರಿಷ್ಠ ಕಡಿತ ಪ್ರತಿ ತಿಂಗಳಿಗೆ ₹400/-)
ಇಂಪೀರಿಯಂ- ಹೌದು (ಕನಿಷ್ಠ 400/ ಮೌಲ್ಯದ ವಹಿವಾಟಿಗೆ
ಗರಿಷ್ಠ ₹4000/- ವರೆಗೆ, ಗರಿಷ್ಠ ಕಡಿತ ಪ್ರತಿ ತಿಂಗಳಿಗೆ ₹400/-)

ಎಲ್.ಐ.ಸಿ. ಎಕ್ಲಾಟ್- ಹೌದು (ಕನಿಷ್ಠ 400/ ಮೌಲ್ಯದ ವಹಿವಾಟಿಗೆ
ಗರಿಷ್ಠ ₹5000/- ವರೆಗೆ, ಗರಿಷ್ಠ ಕಡಿತ ಪ್ರತಿ ತಿಂಗಳಿಗೆ ₹500/-)</td></tr>
</table>

	ಎಲ್.ಐ.ಸಿ. ಲುಮಿನ್- ಹೌದು (ಕನಿಷ್ಠ 400/ ಮೌಲ್ಯದ ವಹಿವಾಟಿಗೆ **ಗರಿಷ್ಠ** ₹4000/- ವರೆಗೆ, ಗರಿಷ್ಠ ಕಡಿತ ಪ್ರತಿ ತಿಂಗಳಿಗೆ ₹300/-)

ರಿವಾರ್ಡ್ ರಿಡೆಂಪ್ಷನ್ ಶುಲ್ಕ	**ಶೂನ್ಯ(ಎಲ್ಲ ಕಾರ್ಡ್ ವಿಧಗಳಿಗೂ)**
ಕಾರ್ಡ್ ಖಾತೆ ಮುಚ್ಚುವ ಶುಲ್ಕಗಳು	**ಆಸ್ಪೈರ್-ಶೂನ್ಯ, ರಾಯಲ್-ಶೂನ್ಯ, ಯೂಫೋರಿಯಾ-ಶೂನ್ಯ, ವಿನ್ನಿಂಗ್ಸ್-ಶೂನ್ಯ, ಇಂಪೀರಿಯಂ**-₹999/- ವಿತರಣೆ ಮಾಡಿದ ಒಂದು ವರ್ಷದಲ್ಲಿ ಕೊನೆಗೊಳಿಸಿದರೆ **ಎಲ್.ಐ.ಸಿ. ಎಕ್ಲಾಟ್** -₹999/- ವಿತರಣೆ ಮಾಡಿದ ಒಂದು ವರ್ಷದಲ್ಲಿ ಕೊನೆಗೊಳಿಸಿದರೆ **ಎಲ್.ಐ.ಸಿ. ಲುಮಿನ್** -₹999/- ವಿತರಣೆ ಮಾಡಿದ ಒಂದು ವರ್ಷದಲ್ಲಿ ಕೊನೆಗೊಳಿಸಿದರೆ
ಐ.ಆರ್.ಸಿ.ಟಿ.ಸಿ. ಟಿಕೆಟ್ ಗಳ ಖರೀದಿ ಅಥವಾ ರದ್ದುಗೊಳಿಸಿದ್ದಕ್ಕೆ ಶುಲ್ಕಗಳು	ಐ.ಆರ್.ಸಿ.ಟಿ.ಸಿ/ಭಾರತೀಯ ರೈಲ್ವೆ ಸೂಚಿಸಿದಂತೆ

ಬಾಕಿ ವರ್ಗಾವಣೆ ಸೌಲಭ್ಯವನ್ನು ಪ್ರಸ್ತುತ ಬ್ಯಾಂಕ್ ನೀಡುತ್ತಿಲ್ಲ.
ಹೆಚ್ಚಿನ ವಿವರಗಳಿಗೆ, ದಯವಿಟ್ಟು ನಮ್ಮ ವೆಬ್ಸೈಟ್ www.idbibank.in ಗೆ ಭೇಟಿ ಕೊಡಿ
ಸೂಚನೆ: ಎಲ್ಲ ಶುಲ್ಕಗಳು ಮತ್ತು ದಂಡಶುಲ್ಕಗಳು ಅನ್ವಯಿಸುವ ಸರಕು ಮತ್ತು ಸೇವೆಗಳ ತೆರಿಗೆಗೆ ಹೊರತಾಗಿರುತ್ತವೆ.

67719100

(ನಾನ್-ಟೋಲ್ ಫ್ರೀ) Website: www.idbibank.in | **E-mail Address:** customercare@idbi.co.in

CIN - L65190MH2004GOI148838